ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February , 2024, Pp. 22-36.
©*IIMRD*, Mysuru

IIMRD JOURNALS
www.iimrd.com

# ಮಾಲತಿ ಪಟ್ಟಣಶೆಟ್ಟಿ ಅವರ ಲೇಖನ ಬರಹಗಳು : ಒಂದು ಸಮೀಕ್ಷೆ

**ಡಾ. ತಿಪ್ಪೇಸ್ವಾಮಿ ಡಿ. ಎಸ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ
ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

**ಸಾರಾಂಶ: (Abstract)**

*ಕನ್ನಡ ಸಾಹಿತ್ಯ ಲೋಕದಲ್ಲಿ ಮಿಂಚಿದ ಅನೇಕ ಮಹಿಳೆಯರ ಸಾಲಿನಲ್ಲಿ ಹೊಳೆಯುತ್ತಿರುವ ಲೇಖಕಿ ಮಾಲತಿ ಪಟ್ಟಣಶೆಟ್ಟಿ ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಒಂದು ಸಮೀಕ್ಷೆ, ರಾ. ಕು ಅವರ 'ಗಾಳಿಪಟ', ಬಾಳು ಸೊಗಸಾದರೂ– ಕೆಲಟಿಪ್ಪಣೆಗಳು, ಹಾಸ್ಯ ಸಾಹಿತ್ಯದಲ್ಲಿ ಹೆಜ್ಜೆ ಮೂಡಿಸುತ್ತಿರುವ ಸುಮಿತ್ರಾ ಹಲವಾವಿಯವರ 'ಯಮಲೋಕಕ್ಕೊಂದು ಹ್ಯಾಪಿ ಜರ್ನಿ' ಮುಂತಾದ ಮಹಾನ್ ಕನ್ನಡ ಸಾಹಿತಿಗಳ ಕೃತಿಗಳನ್ನಿಟ್ಟುಕೊಂಡು ತಮ್ಮದೇ ಆದ ವಿಶಿಷ್ಠ ಶೈಲಿಯ ಮೂಲಕ ಕನ್ನಡ ಸಾಹಿತ್ಯವನ್ನು ಹೇಗೆ ಬೆಳಕಿಗೆ ತಂದಿದ್ದಾರೆ ಎಂಬುದನ್ನು ಈ ಲೇಖನದ ಮೂಲಕ ತಿಳಿಸಲು ಪ್ರಯತ್ನಿಸಲಾಗಿದೆ.*

**ಮುಖ್ಯಪದಗಳು (Keywords):** ಮಲೆನಾಡು, ಗಾಳಿಪಟ, ಬಾಳು ಸೊಗಸು, ಯಮಲೋಕ, ತೆರೆಯ ಹಿಂದೆ

**ಪೀಠಿಕೆ** ಇಂದಿನ ಕನ್ನಡದ ಹಿರಿಯ ಲೇಖಕಿಯರಲ್ಲಿ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿಯವರೂ ಒಬ್ಬರು, ಅವರು ಸಾಹಿತ್ಯದ ಎರಡು ಪ್ರಕಾರಗಳಲ್ಲಿ ಕಳೆದ ಎರಡು ದಶಕಗಳಿಂದ ಅವ್ಯಾಹತವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಕವಯತ್ರಿಯಾಗಿಯೇ ಹೆಚ್ಚು ಪ್ರಸಿದ್ದರು. ಅವರ ಪ್ರೀತಿಯ ಇನ್ನೊಂದುಗೆಯ್ಮೆ ಕಥಾರಚನೆ ಅವರ ಸೃಜನಶೀಲ ಮನಸ್ಸು ಕತೆ, ಕವಿತೆ, ಮಹಿಳಾ ಲೇಖನಗಳ ಸೊಗಡನ್ನು ತಂದು ನಿಲ್ಲಸುತ್ತದೆ. ಅವರ ಹೊಸ ಲೇಖನಗಳಲ್ಲಿ ಸರ್ಯೋದಯ,ಸೂರ್ಯಾಸ್ತ, ಪ್ರಕೃತಿಯ ವಿವಿಧ ಚಿತ್ತಾರಗಳು, ಸಮುದ್ರದ ವಿವಿಧ ತರಂಗಗಳು ಮತ್ತೆ–ಮತ್ತೆ ಸುಳಿದಾಡುವುದನ್ನು ಕಾಣುತ್ತೇವೆ. ಅವರ ಪ್ರತಿಯೊಂದು ಲೇಖನಗಳಲ್ಲಿ ಸ್ತ್ರೀ–ಪಾತ್ರಗಳು ಒಂದಲ್ಲ ಒಂದು ಭಾವನಾತ್ಮಕ ಸಂಘರ್ಷಕ್ಕೂ ಒಳಗಾಗಿರುವುದನ್ನು ಕಾಣುತ್ತೇವೆ. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಯರು ಅನುಭವಿಸುವ ಆಘಾತಗಳು ಹಲವು ತೆರನಾಗಿದ್ದು, ಅವುಗಳಲ್ಲಿ ಕೆಲವು ಶ್ರೀಮತಿ ಪಟ್ಟಣಶೆಟ್ಟಿಯವರ ಗಮನವನ್ನು ಸೆಳೆದುಕೊಂಡಿವೆ. ಕೆಲವರಾದರೂ ಸ್ತ್ರೀಯರ ದಟ್ಟತನದಿಂದ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಯತ್ನಿಸಿದ್ದುದು ಅಷ್ಟೇ ಅಲ್ಲ; ಛಲದಿಂದ ಬದುಕು ಮಾಡಿತೋರಿಸಲು ನಿಂತಿದ್ದು ಲಕ್ಷಿಸತಕ್ಕ ಸಂಗತಿಯಾಗಿದೆ. ಈ ದೃಷ್ಟಿಯಿಂದ ಅವರನ್ನು ಕವಿಯತ್ರಿಯಾಗಿಯೇ ಹೆಚ್ಚು ಸೂಕ್ತವಾದದ್ದು. ಅವರ ಮೂಮತ್ತಕ್ಕೂ ಮೇಲ್ಪಟ್ಟ ಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ, ಸಂಚಿಕೆಗಳಲ್ಲಿ ಗ್ರಂಥಗಳಲ್ಲೊ ಪ್ರಕಟವಾಗಿವೆ. ಅವುಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಸಾಹಿತ್ಯಿಕ

*Please cite this article as: ತಿಪ್ಪೇಸ್ವಾಮಿ ಡಿ. ಎಸ್.* (2024). ಮಾಲತಿ ಪಟ್ಟಣಶೆಟ್ಟಿ ಅವರ ಲೇಖನ ಬರಹಗಳು : ಒಂದು ಸಮೀಕ್ಷೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ.* 22–36

ಲೇಖನಗಳು, ಸಾಂಸ್ಕೃತಿಕ ಲೇಖನಗಳು (ಸಾಂದರ್ಭಿಕ ಲೇಖನಗಳು), ಸ್ತ್ರೀ ಪರವಾದ ಧೋರಣೆಯ ಲೇಖನಗಳು, ಇತರೆ ಲೇಖನಗಳು ಎಂದು ನಾಲ್ಕು ವಿಧವಾಗಿ ವಿಂಗಡಿಸಿಕೊಳ್ಳಲಾಗಿದೆ

**1. ಸಾಹಿತ್ಯಿಕ ಲೇಖನಗಳು**

**ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಒಂದು ಸಮೀಕ್ಷೆ**

ಪ್ರಸ್ತುತ ಲೇಖನದಲ್ಲಿ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿಯವರು ಮಲೆನಾಡಿನ ಚಿತ್ರಗಳು ಯಾವ ರೀತಿಯಲ್ಲಿ ಕುವೆಂಪು ಅವರ ವರ್ಣಿಸಿದ್ದಾರೆ ಎಂಬುದು ಈ ಮುಖ್ಯ ಲೇಖನವಾಗಿದೆ. ಇದರಲ್ಲಿ ಹರಟೆಯ ಜೊತೆಗೆ ತಮ್ಮ ಮಲೆನಾಡಿನ ಬಗೆಗಿನ ಆರಾಧನಾ ಭಾವವನ್ನು ಅಭಿವ್ಯಕ್ತಿಸಿದ್ದಾರೆ. ಮಲೆನಾಡಿನ ಬಾಲ್ಯ ಜೀವನದ ಸವಿನೆನಪುಗಳ ಬುತ್ತಿಯನ್ನು ರಸಿಕರಾದ ಗೆಳೆಯರೊಂದಿಗೆ ಹಂಚಿಕೊಂಡಾಗ ಹೆಚ್ಚಿನ ರಸಾಸ್ವಾದನೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದ್ದಾದ್ದರಿಂದ ಕೃತಿರೂಪದಲ್ಲಿ ಮಲೆನಾಡಿನ ಲೋಕ ಸೌಂದರ್ಯ ಹೆಚ್ಚಿಸಲು ಲೇಖಕಿಯರು ತೆರೆದು ತೋರಿಸಿದ್ದಾರೆ.

ಮಲೆನಾಡಿನ ಸೌಂದರ್ಯ ವಿವಿಧ ರೀತಿಯ ಪುಸ್ತಕದಲ್ಲಿ ಮೂಡಿಸಿದ ಹನ್ನೆರಡು ಚಿತ್ರಗಳಲ್ಲಿ ವಸ್ತು, ವಿಷಯದ ದೃಷ್ಟಿಯಿಂದ ನಾಲ್ಕು ಭಾಗಗಳಲ್ಲಿ ವಿಂಗಡಿಸಿ ಮಲೆನಾಡಿನ ವಿವಿಧ ಮುಖಗಳನ್ನು ಲೇಖಕರು ತೋರಿಸಿಕೊಟ್ಟಿದ್ದಾರೆ. ಒಂದು ಮಲೆನಾಡ ಪ್ರಮುಖ ಉದ್ಯೋಗವಾದ ಅಥವಾ ಹವ್ಯಾಸವಾದ ಬೇಟೆಗಾರಿಕೆಯ ಚಿತ್ರ ಹಾಗೂ ಅದರ ಜೊತೆ ಜೊತೆಗೆ ಚಿತ್ರಿತವಾಗುವ ಮಲೆನಾಡಿನ ಕಾಡು ಚಿತ್ರವನ್ನು ಮತ್ತು ಹರಟೆಗಳನ್ನು ಗುರುತಿಸಿದ್ದಾರೆ. ಎರಡನೆಯದಾಗಿ ಈ ಕಾದಿನಂಕದಲ್ಲಿ ಕುರಿತು ಕುಪ್ಪಳಿಯ ಮಹಾಮನೆ, ಹೆಮ್ಮನೆ, ಮಲೆನಾಡ ವಿಶಿಷ್ಟ ಮನೆಯ ಒಳಗೆ ಹಾಗೂ ಅಂಗಳದಲ್ಲಿ ಘಟಿಸುವ ಪ್ರಸಂಗಗಳ ಜೊತೆಗೆ ಹರಟೆಗಳನ್ನು ಪ್ರಸ್ತಾಪಿಸಿದ್ದಾರೆ. ಮೂರನೆಯದಾಗಿ ಮಲೆನಾಡಿನ ವಿಶಿಷ್ಟ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಅಲ್ಲಿನ ಜನ ಬೇಟೆಯಾಟ ಒಂದು ಹವ್ಯಾಸವಾಗಿ, ಒಂದು ಉಪಜೀವನದ ಒಂದು ಉಪಾಯವಾಗಿ ಮಲೆನಾಡಿಗರನ್ನು ಕಾಡಿನತ್ತ ಆಕರ್ಷಿಸುತ್ತವೆ. ಆದೆ ಕವಿಹೃದಯದ ಕುವೆಂಪು ಅವರಿಗೆ ಬೇಟೆ ಮುಖ್ಯವಾಗದೆಮ ಅದು ಒಂದು ನೆಪವಾಗಿ ಓದುಗರನ್ನು ಕಾಡಿನ ವರ್ಣನೆಗಾಗಿ ಕರೆದೊಯ್ಯುವುದು ಲೇಖನದ ಮುಖ್ಯ ಉದ್ದೇಶವಾಗಿದೆ.

**ರಾ. ಕು ಅವರ 'ಗಾಳಿಪಟ'**

ಗಾಳಿಪಟ ಈ ಸಂಗ್ರಹದ ಅತ್ಯಂತ ಯಶಸ್ವಿ ಪ್ರಬಂಧ ಇವರ ದೀಘಂಟೆಯೊಂದನ್ನು ಬಿಟ್ಟರೆ ಒಂದು ಪ್ರಬಂಧ ಹೇಗಿರಬೇಕು ಎಂದು ಬೆರಳೆತ್ತಿ ತೋರಬಹುದಾದ ಪ್ರಬಂಧ ಅದರ ವಿಷಯ, ನಿರೂಪಣೆ, ಶೈಲಿ ಕಲಾತ್ಮಕತೆ, ಆತ್ಮೀಯಭಾಷೆಗಳ ಸುಂದರ ಪ್ರಯೋಗ ಈ ಪ್ರಬಂಧದಲ್ಲಾಗಿವೆ. ಪ್ರಬಂಧದ ಪ್ರಾರಂಭವೇ ಕಾವ್ಯಮಯವಾಗಿದೆ.

ವೈಚಾರಿಕ ಪ್ರಬಂಧಗಳಿಗೆ ಇರುವ ಸಂಶೋಧನಾತ್ಮಕ ವಿಮರ್ಶೆಗಳ ಮೆಟ್ಟಿಲು, ವಿಶ್ಲೇಷಣಾತ್ಮಕ ವಿಷಯ ಗಂಭೀರ್ಯದ ಪ್ರಕಾರಗಳು ಲಲಿತ ಪ್ರಬಂಧಕ್ಕೆ ಬೇಕೆಲ್ಲ. ಹಾಗೆಂದ ಮಾತ್ರಕ್ಕೆ ಲಲಿತ ಪ್ರಬಂಧದಲ್ಲಿ ಗಂಭೀರ ವೆಂದರ್ಥವಲ್ಲ ವಿಚಾರಗಳಿರುವುದಿಲ್ಲ. ಯಾವುದೇ ಒಂದು ವಿಷಯದಿಂದ ಪ್ರಾರಂಭಿಸಿ, ಬೇರೆ ಬೇರೆ ವಿಚಾರಗಳ ಟೊಂಗೆಗೆ ಹಾರುತ್ತ ಯಾವುದೋ ವಿಷಯದಲ್ಲಿ ಮುಕ್ತಾಯವಾಗುವ ಹರಟೆಯ ಔಚ್ಯಂಕಲ್ಯ

ಲಲಿತ ಪ್ರಬಂಧದಲ್ಲಿ ಇಲ್ಲದಿದ್ದರೂ ಹೂವಿನಿಂದ ಹೂವಿಗೆ ಹಾರುಡುವ ಜೇನ್ನೋಣ ದೂರ ದೂರಿ ಅಲೆದು ಶೇಖರಿಸುವಂತೆ ಪ್ರಬಂಧಕಾರ ತನ್ನ ವಿಷಯಕ್ಕೆ ಸಂಬಂಧಪಟ್ಟ, ಯಾವ ವಲಯದಲ್ಲೂ ಸ್ವಚ್ಛಂದದಿಂದ ವ್ಯವಹರಿಸಬಲ್ಲ, ಜನಸಾಮಾನ್ಯರ ಜೀವನಕ್ಕೆ ವಿಷಯ ಎಷ್ಟು ಹತ್ತಿರವಾಗಿರುತ್ತದೆಯೋ ಅಷ್ಟೇ ಹೆಚ್ಚು ಆಸಕ್ತಿಯನ್ನು ಪ್ರಬಂಧ ವಿಷಯ ಅರಳಿಸುತ್ತದೆ ಪ್ರಬಂಧಕಾರನ ಮ್ಯಾಜಿಕದಿಂದ ಟಚ್ ಸಮಾನ್ಯತೆ ಹಿರಣ್ಯಯತೆಯನ್ನು ಪಡೆಯುತ್ತದೆ. ಆದ್ದರಿಂದ ಲಲಿತ ಪ್ರಬಂಧದಲ್ಲಿ ವಿಷಯಕ್ಕಿಂತ ನಿರೂಪಣೆ ಶೈಲಿ ಹೆಚ್ಚು ಮಹತ್ವದಾಗಿದೆ. ವಿಷಯ ಚಯನದಲ್ಲಿ ಹಾಸ್ಯ, ವಿಡಂಬನೆ, ಕಲ್ಪಕತೆ ಸಹಜವಾಗಿ ಚಿರುಗುವ ವಿಷಯವನ್ನು ಆಯ್ಕೆಮಾಡಬಹುದು. ಇಂಥ ಆಯ್ಕೆ ಗಾಳೀಪಟ ಪ್ರಬಂಧಗಳಲ್ಲಿ ಮಾಲತಿ ಪಟ್ಟಣ ಶೆಟ್ಟಿಯವರು ಬಹುಮುಖ ರೀತಿಯಲ್ಲಿ ಗುರುತಿಸಿದ್ದಾರೆ.

**ಬಾಳು ಸೊಗಸಾದರೂ– ಕೆಲಟಿಪ್ಪಣೆಗಳು**

ಈ ಆತ್ಮಕಥನದಲ್ಲಿ ಮಾಲತಿ ಪಟ್ಟಣಶೆಟ್ಟಿಯವರು ನಿವೇದನೆಯ ನೆನಪಿನಾಗಸದಲ್ಲಿ ಅತ್ಯಂತ ಪ್ರಮುಖವಾಗಿ ಹೊಳೆದ ನೆನಪು ಹಾರಿಕೆಗಳಿವೆ. ಧಾಮಾಪುರದ ಬಾಲ್ಯದ ಆ ದಿನಗಳ ನೆನಪಿನ ಧ್ರುವತಾರೆ, ಅಜ್ಜಿಯ ಸಂಬಂಧಗಳ ನೆನಪು, ನಾಲ್ವತ್ತೆರಡರ ಚಲೋ ಜಾವೋ ಚಳವಳಿಯಲ್ಲಿ ಆದರ್ಶಗಳ, ದೇಶಭಕ್ತಿಯ ವಿಭೂತಿಯನ್ನು ಹಣೆಗೆ ಧರಿಸಿ ಸಂಪ್ರದಾಯಸ್ಥ ಕುಟುಂಬ ಬಂಧನಗಳನ್ನು ಕಳಚಿ ಹೊರಟ ಹದಿಯರೆಯದ ಆ ಮುಗ್ಧ ಬಾಲೆಯ ಬದುಕಿನಲ್ಲಿ ಹಿತಮಿತವಾದ ಸಾಂಗತ್ಯ ನೀಡಿದ ಅಗಸರ ಅಲಿ ಭೈಯ್ಯನ ನಿಷ್ಕಲ್ಮಷ ಪ್ರೇಮದ ನೆನಪು, ಬಾಳಿನುದ್ದಕ್ಕೂ ಬಾಳ ಸಂಗಾತಿಯಾಗಿ ನಡೆದ, ಮರಾಠಿ ಸಾಹಿತ್ಯದಲ್ಲಿ ಸಾಹಿತ್ಯದಿಗ್ಗಜ ಎಂದೇ ಗುರುತಿಲ್ಪಟ್ಟ ಲೇಖಕಿಯರು ಸಂವೇದನೆಯಾಗಿದೆ.

**ಮೃದುಲಾಗರ್ಗ**

ಪ್ರಸ್ತುತ ಲೇಖನದಲ್ಲಿ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರು 80ನೇ ದಶಕದಿಂದೇಚೆ ಹಿಂದಿ ಸಾಹಿತ್ಯದಲ್ಲಿ ಕತೆ, ಕಾದಂಬರಿಗಳಲ್ಲಿ ನೋವು ನಲಿವುಗಳನ್ನು ಸ್ತ್ರೀ ಸಂವೇದಗಳ ವಿರುದ್ಧ ಪ್ರತಿಭಟನೆ ಮನೋಭಾವ ಮನುಷ್ಯ ಸಂವೇನೆಗಳ ರಸಘಟಿಯಂಥ ಕತೆಗಳೂ ಬರೆದ ಮೃದುಲಾ ಗರ್ಗ ಹೆಸರನ್ನು ಲೇಖಕಿ ಅವರು ಇಲ್ಲ ಎತ್ತಿ ಹೇಳಿದ್ದಾರೆ. ಆಧುನಿಕ ಯುಗದ ಇತ್ತೀಚಿನ ಕ್ರಾಂತಿಕಾಕ ಬದಲಾವಣೆಗಳಿಂದಾಗಿ ಒಡೆದುಹೋಗುವ ಸಂಬಂಧಗಳು, ಬದಲಾಗುತ್ತಿರುವ ಮೌಲ್ಯಗಳು ಪರಿಸರದಲ್ಲಿ ಬದಲಾದ ಮಹಿಳಾ ದೃಷ್ಟಿಕೋನ, ವಿಚಾರ ಸ್ಪಂದನೆಗಳನ್ನು ಇಲ್ಲಿ ಗುರುತಿಸಿದ್ದಾರೆ. ಲೇಖಕಿಯರು ಗಂಡು–ಹೆಣ್ಣು, ಶ್ರೀಮಂತ–ಬಡವ, ಉಚ್ಚ–ನೀಚ ಎಂಬ ಬೇದಗಳನ್ನು ಬಿಟ್ಟು ನೆಲೆಯಲ್ಲಿ ಎಲ್ಲವನ್ನು ಪರೀಕ್ಷಿಸುತ್ತ ಮುಂದಾಗಿದ್ದಾರೆ.

**ಹಾಸ್ಯ ಸಾಹಿತ್ಯದಲ್ಲಿ ಹೆಜ್ಜೆ ಮೂಡಿಸುತ್ತಿರುವ ಸುಮಿತ್ರಾ ಹಲವಾವಿಯವರ 'ಯಮಲೋಕಕ್ಕೊಂದು ಹ್ಯಾಪಿ ಜರ್ನಿ'**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾವ್ಯ, ಕತೆ, ಕಾದಂಬರಿ ಪ್ರಕಾರಗಳಿಗೆ ಕನ್ನಡದ ಲೇಖಕರು ನೀಡಿದ ಕೊಡುಗೆ ಅಮೂಲ್ಯವೂ, ಅಪಾರವೂ ಆಗಿದೆ. ಆದರೆ ಹಾಸ್ಯ ಸಾಹಿತ್ಯದ ವಿಷಯದಲ್ಲಿ ಸುಮಿತ್ರಾ ಹೆಜ್ಜೆ ಮೂಡಿಸಿದ್ದಾರೆ ಎಂದು ಮಾಲತಿ ಪಟ್ಟಣಶೆಟ್ಟಿ ಅವರು ಗುರುತಿಸಿದ್ದಾರೆ. ಹಾಸ್ಯ ಮನೋಧರ್ಮವನ್ನು ಸಹಜವಾಗಿ ಪಡೆದ ಹಾಸ್ಯ ನಾಟಕ, ಹರಟೆ, ಪ್ರಹಸನ ಲಲಿತ ಪ್ರಬಂಧಗಳಂಥ ಇತರ ಹಾಸ್ಯ ಪ್ರಕಾರಗಳಲ್ಲೂ

ಇವರ ಹಾಸ್ಯ ವಿಡಂಬನೆಗಳ ಮುಖ್ಯ ಉದ್ದೇಶ, ಸಮಾಜಿಕ, ಶೈಕ್ಷಣಿಕ, ರಾಜಕೀಯ, ನೈತಿಕ, ಕ್ಷೇತ್ರಗಳಲ್ಲಿಯ ಹುಳುಕುನ್ನು ಎತ್ತಿ ತೋರಿ ಆ ಮೂಲಕ ಓದುಗರನ್ನು ಚಿಂತನಕ್ಕೆ ಪ್ರೇರೆಪಿಸುವುದು–ಈ ಕೆಲಸವನ್ನು ಸುಮಿತ್ರಾ ತಮ್ಮ ಲೇಖನಗಳನ್ನು ಮಾಡಿದ್ದಾರೆ ಎಂದು ಲೇಖಲಿ ಸೂಚಿಸಿದ್ದಾರೆ.

ಸುಮಿತ್ರಾ ಅವರು ಪ್ರಸ್ತಾಪಿಸುವ ಹಾಸ್ಯ ಲೇಖನಗಳಲ್ಲಿಯೂ ನವರಸಗಳ ಸಮೀಕರಣ ಗೊಂಡಿವೆ. ಸಾಹಿತ್ಯ ಶಾಸ್ತ್ರಜ್ಞರು ಹೇಳುವಂತೆ ಸಂಸ್ಕೃತ ನಾಟಕಗಳಲ್ಲಿ ವಿದೂಷಕನ ಪಾತ್ರವನ್ನು ಹಾಸ್ಯ ಸೃಷ್ಟಿಗೆಂದೇ ನಿರ್ಮಿಸಿದ್ದು ಎಂಬುದು ಸರ್ವವಿಧಿತ ಸಾಹಿತ್ಯವು ಕೇವಲ ಜೀವನದ ಪ್ರತಿಬಿಂಬವಾಗಿದರೆ, ರಸಬಿಂಬವೂ ಆಗಿರದೆ ದುರ್ಮಾರ್ಗಕ್ಕೆಳೆಯುತ್ತಿರುವ ಸಮಾಜಕ್ಕೆ ಹಾಸ್ಯ, ವಿಡಂಬನೆ, ಕಟಕಿಯಂಥ ಶಿಕ್ಷಾದಂಡಗಳಿಂದ ದಂಡಿಸುವ, ಮುನ್ನೆಚ್ಚರಿಸುವ ಹಿತೈಷಿ ಆಗಿದೆ. ಇಂಥ ಜಾಗೃತಿಯನ್ನು 'ಯಮಲೋಕಕ್ಕೊಂದು, ಹ್ಯಾಪಿ ಜರ್ನಿ' ಓದುಗರಲ್ಲಿ ಮೂಡಿಸುತ್ತದೆ ಎಂದು ಲೇಖಕಿಯ ಅಭಿಪ್ರಾಯವಾಗಿದೆ.

**ಸಣ್ಣ ಕತೆಯ ಸ್ವರೂಪ**

ಗದ್ಯ–ಪದ್ಯಗಳ ಸುಸ್ಪಷ್ಟವಾದ ವಿಡಂಬನೆ ಯಾವಾಗ ಆಯಿತೆಂಬುದನ್ನು ಊಹಿಸುವದು ಕಷ್ಟ ಎಂದು ನಮ್ಮ ಸಾಹಿತ್ಯ ಇತಿಹಾಸಕಾರರು ಹೇಳುತ್ತಾರೆ. 10ನೆಯ ಶತಮಾನದಲ್ಲಿ ರಚಿತವಾದ ' ವಡ್ಡರಾಧನೆ'ಯನ್ನು ಕನ್ನಡದ ಮೊದಲ ಕಥಾ ಸಂಕಲನವೆಂದು ನಿರ್ಧರಿಸಿದ್ದಾರೆ. ಯುರೋಪ್ನಲ್ಲೂ ಮುನ್ನೂರು ವರ್ಷಗಳಿಂದೀಚೆಗೆ ಲೇಖಕರು ಗದ್ಯದ ಸಾಮರ್ಥ್ಯವನ್ನು ಕಂಡು ಹಿಡಿದು ಗದ್ಯಸಾಹಿತ್ಯದಲ್ಲಿ ವಿಕ್ರಮಗಳನ್ನು ಸಂಧಿಸಿದ್ದಾರೆ. ಮುನುಷ್ಯನ ಕಲ್ಪನೆಯ ತೆರೆ ಸುರಿದು ವಾಸ್ತವಿಕ ವೈಜ್ಞಾನಿಕ ದೃಷ್ಟಿಕೋನ ಬಂದಂದಿನಿಂದ ಗದ್ಯದ ಮೇಲುಗೈಯಾಗುತ್ತಿರುವದನ್ನು ಕಾಣುತ್ತಿದ್ದೇವೆ ಎಂದು ಮಾಲತಿ ಪಟ್ಟಣಶೆಟ್ಟಿ ಅವರ ಆಶಯವಾಗಿದೆ.

ಗದ್ಯ ಪ್ರಕಾರಗಳ ಸುಗ್ಗಿಯ ಇಂದಿನ ಕಾಲದಲ್ಲಿ ಭಾರತದ ಎಲ್ಲ ಭಾಷೆಗಳನ್ನೂ ಸಣ್ಣಕತೆಗಳದೊಡ್ಡ ಇಳುವರಿಯನ್ನು ಭಾರತೀಯ ಸಾಹಿತ್ಯದ ಪಡೆದುಕೊಂಡಿದೆ ಆಂಗ್ಲ ಭಾಷೆ ಮತ್ತು ಸಾಹಿತ್ಯಗಳ ಪ್ರಭಾವ ಭಾರತೀಯ ಸಾಹಿತ್ಯದ ಮೇಲಾದಂತೆ ಕನ್ನಡದ ಮೇಲೂ ಆಯಿತು. ಆಂಗ್ಲ ಭಾಷೆ ಮತ್ತು ಸಾಹಿತ್ಯ ಪ್ರಕಾರಗಳನ್ನು ಕನ್ನಡಿಗರು ನೇರವಾಗಿ ಸ್ವೀಕರಿಸಿದರು. ಭಾವಗೀತೆ ಹರಟೆಗಳೊಂದಿಗೆ ಪಾಶ್ಚಾತ್ಯ ಸಾಹಿತ್ಯದಿಂದ ಬಂದ ಸಣ್ಣಕತೆ ಭಾವಗೀತೆದಂತೆ ನವೋದಯ ಸಂಸ್ಕಾರವನ್ನು ಪಡೆದುಕೊಂಡಿತು. ಇಂದಿನ ಎಲ್ಲಾ ನಿಯತ ಕಾಲಿಕ ಪತ್ರಿಕೆಗಳಲ್ಲಿ ಸಣ್ಣ ಕತೆಯದೇ ಸಿಂಹಪಾಲು. ಕೆಲವು ದಶಕಗಳಿಂದ ರಾಜ್ಯವಾಳುತ್ತಿದ್ದ ಕಾದಂಬರಿ ಪ್ರಕಾರವನ್ನು ಪಟ್ಟದಿಂದಿಳಿಸಿ ಈಗ ಎಲ್ಲರ ಮನಸ್ಸನ್ನಾಳುತ್ತಿದೆ. ಈ ಸಾಹಿತ್ಯ ಪ್ರಕಾರ ಸಣ್ಣಕತೆ ಗದ್ಯ ಪ್ರಕಾರಗಳಲ್ಲಿ ವಿಶಿಷ್ಟ ಸ್ವರೂಪವುಳ್ಳದ್ದಾಗಿದೆ. ಸ್ವಾತಂತ್ರವೂ, ಸುಷ್ಪಷ್ಟವೂ ಆದ ಕಲಾತ್ಮಕ ರೂಪವುಳ್ಳ ಇಂದಿನ ಸಣ್ಣಕತೆ ಇತ್ತೀಚಿನದು ಎಂಬುದನ್ನು ಗುರುತಿಸಿದ್ದಾರೆ.

**ರಾ. ಯ. ಧಾರವಾಡಕರರ ಸಣ್ಣಕತೆಗಳು**

ಮಾಲತಿ ಪಟ್ಟಣಶೆಟ್ಟಿಯವರು ರಾ. ಯ. ಧಾರವಾಡಕರರ ಸಣ್ಣಕತೆಗಳ ಸಮಗ್ರವನ್ನು ಬಿಡಿ, ಬಿಡಿಯಾಗಿ ಈ ಲೇಖನದಲ್ಲಿ ಗುರುತಿಸಿದ್ದಾರೆ. 'ಅಮೇರಿಕೆಯ ನಿಗ್ರೋಕತೆಗಳು', 'ತೆರೆಯ ಹಿಂದೆ' ಈ ಎರಡು ಕಥಾ ಸಂಕಲನಗಳು ಭಿನ್ನ ಸಮಾಜ, ಭಿನ್ನ ಪರಿಸರಗಳ ವಿಶಿಷ್ಟ ಸಮಸ್ಯೆ, ಅನುಭವಗಳ ಸುತ್ತ

ಹೆಣೆದುಕೊಂಡಿದ್ದರೂ ಇಲ್ಲಿಯ ಕತೆಗಳಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳೆಲ್ಲ ಮಾನವೀಯ ಮೌಲ್ಯಗಳೆಂದು ಎತ್ತಿಹಿಡಿದಿದ್ದಾರೆ.

ಒಂದು ಸಾಹಿತ್ಯಯಾತ್ರೆಯನ್ನು ಒಂದು ನದಿಗೆ ಹೋಲಿಸುತ್ತಾ ಅಕ್ಕ ಪಕ್ಕದಲ್ಲಿ ಹರಿದು ಬರುವ ಹೊಳೆ ಹಳ್ಳಗಳನ್ನು ಮೈಗೂಡಿಸಿಕೊಂಡ ಮೂಲಪ್ರವಾಹವು ತನ್ನ ಪಾತ್ರದಯನ್ನು ವಿಸ್ತರಿಸಿಕೊಳ್ಳವಂತೆ ಲೇಖಕ ತನ್ನ ಮೂಲ ಪ್ರವೃತ್ತಿಗೊಗ್ಗುವ ನೆಚ್ಚಿನ ಸಾಹಿತ್ಯ ಪ್ರಕಾರದೊಂದಿಗೆ ಬೇರೆ ಸಾಹಿತ್ಯ ಪ್ರಕಾರಗಳಲ್ಲೂ ತನ್ನ ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸಿಕೊಳ್ಳುತ್ತ ತನ್ನ ಪಾತ್ರದಯನ್ನು ಬೆಳೆಸಿಕೊಳ್ಳುವಂತೆ ಡಾ. ರಾಯ ಧಾರವಾಡಕರರ ಮೂಲ ಪ್ರವೃತಿ ವಿಮರ್ಶೆ ಸಂಶೋಧನಾವಾಗಿದ್ದರೂ ಅವರ ನೆಚ್ಚಿನ ಸಾಹಿತ್ಯ ಪ್ರಕಾರ ಲಿಲಿತ ಪ್ರಬಂಧವಾಗಿದ್ದರೂ ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಹಾಗೂ ಸಣ್ಣಕತೆಯಂಥ ಇತರ ಸೃಜನಶೀಲ ಪ್ರಕಾರಗಳಲ್ಲಿ ತಮ್ಮ ಲೇಖನಿಯ ಸಾಮರ್ಥ್ಯವನ್ನು ಒರೆಗಲ್ಲಿಗೆ ಹಚ್ಚಿ ನೋಡಿದ್ದಾರೆ. ಇತರ ಸಾಹಿತ್ಯ ಪ್ರಕಾರಗಳಲ್ಲಿ ಸ್ಪಷ್ಟವಾಗಿ ಮೂಡದ ಇತರ ವ್ಯಕ್ತಿತ್ವದ ಹೊಳಹುಗಳನ್ನು ಸಣ್ಣಕತೆಗಳಲ್ಲಿ ನಿಚ್ಚಾಳವಾಗಿ ಲೇಖಕಿ ಗುರುತಿಸಿದ್ದಾರೆ.

**ಹೊಸಗನ್ನಡ ಕಾವ್ಯಕ್ಕೆ ಧಾರವಾಡ ಜಿಲ್ಲೆಯ ಕವಿಯ ಕೊಡುಗೆ**

ಪ್ರಸ್ತುತ ಲೇಖನದಲ್ಲಿ ಮಾಲತಿ ಪಟ್ಟಣಶೆಟ್ಟಿಯವರ ಒಂದು ಜಿಲ್ಲೆಗೆ ನೀಮಿತವಾದ ಕವಿಗಳನ್ನು ನವೋದಯ, ನವ್ಯ ದಲಿತ ಬಂಡಾಯ ಎಂದು ಮೂರು ರೀತಿಯಲ್ಲಿ ಕವಿಗಳನ್ನು ಗುರುಗುತಿಸಿದ್ದಾರೆ. ಈ ಪ್ರಬಂಧದ ಮಿತಿಯಿಂದಾಗಿ ಎಲ್ಲ ಲವಿಗಳ ಹೆಸರುಗಳನ್ನು ಉಲ್ಲೇಖಿಸಲು ಸಾಧ್ಯವಾಗದೆ ಇರುವುದು. ಅದಕ್ಕಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳನ್ನು ಮಾತ್ರ ಉಲ್ಲೇಖಿಸುತ್ತಾ ಪ್ರತಿಯೊಬ್ಬ ಹಿರಿ–ಕಿರಿಯ ಉದಯೋನ್ಮುಖ ಕವಿಗಳನ್ನು ಗುರುತಿಸಿದ್ದಾರೆ.

ಒಂದು ಕಾಲಕ್ಕೆ 'ತಿರುಳನ್ನಡ ನಾಡು' ಎಂದು ಹೆಸರಾದ ಇಂದಿನ ಧಾರವಾಡ ಜಿಲ್ಲೆಯ ಈ ಪ್ರದೇಶದ ಸುದೀರ್ಘವಾದ ಪ್ರಾಗೈತಿಹಾಸಿಕ ಪರಂಪರೆಯುಳ್ಳದ್ದು. ಈ ಭೂದೇವಿಯುಟ್ಟ ಬೆಡಗಿನ ಸೀರೆಗೆ ಮಲೆನಾಡ ಸೆರಗು, ಗಡಿನಾಡ ಮೈ, ಬೆಳವಲದ ಅಂಚು ಇದೆ. ಪಶ್ಚಿಮಕ್ಕೆ ಸಹ್ಯಾದ್ರಿ, ಪೂರ್ವಕ್ಕೆ ಉತ್ತಾಭಿಮುಖ ತುಂಗಭದ್ರೆ ಮಡಿಲಲ್ಲಿ ಹರಿಯುವ ಹೊಳೆ ಹಳ್ಳಗಳು, ಗುಡ್ಡಗಾಡುಗಳ ಪ್ರಕೃತಿ ಸಂಪತ್ತು ಹಾಗೂ ಶಿವಶರಣರ ಆಧ್ಯಾತ್ಮ ಪಥ, ಸಂಗೀತ, ನಾಟಕ, ನೃತ್ಯ, ಚಿತ್ರಕಲೆ, ಶಿಲ್ಪಾದಿಕಲೆಗಳ ತವರೂರು, ಇಂಥ ಸಮೃದ್ಧ ಐತಿಹಾಸಿಕ ಸಾಂಸ್ಕೃತಿಕ, ಭೌಗೋಳಿಕ ಪರಿಸರದಲ್ಲಿ ಈ ಸಾಹಿತ್ಯಶಾಲ್ಮಲೆ ಹೃದಯದಲ್ಲಿ ವ್ಯಕ್ತಳಾಗಿ ನಿರಂತರವಾಗಿ ಹರಿದು ಈ ಕೊರತೆಯನ್ನು ಮರೆಯಿಸಿದ್ದಾಳೆ. ಈ ಜಿಲ್ಲೆಯಲ್ಲಿ ಪ್ರವಹಿಸಿದ ಕಾವ್ಯವಾಹಿನಿಯು ಸ್ವೀಕರಿಸಿದ ಹೊಸ ಅಲೆಗಳು, ಶೋಧಿಸಿಕೊಂಡ ಹೊಸದಿಕ್ಕು, ತೆರೆದು ಕೊಂಡ ಹೊಸ ಹರಹು, ಹೊಸ ಸ್ಥೂಲ ಪರಿಚಯ ಮಾಡಿ ಕೊಡುವ ಪ್ರಯತ್ನಗಳನ್ನು ಲೇಖಕಿ ಮುಂದಾಗಿದ್ದಾರೆ.

**ನಿಸಾರರ ಪ್ರಕೃತಿ ವೈವಿಧ್ಯತೆಯನ್ನು ಪ್ರತಿನಿದಿಸುವ ಕವಿತೆಗಳು :**

ಪ್ರಸ್ತುತ ಲೇಖನದಲ್ಲಿ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿಯವರು ನಿಸಾರ್ ಅಹಮದ್ ಅವರ ಕವಿತೆಗಳಲ್ಲಿ ಪ್ರಕೃತಿಯ ಸಿರಿ ವೈವಿದ್ಯ ಪೂರ್ಣವಾಗಿ ವ್ಯಕ್ತವಾದ ಬಗೆಯನ್ನು ಅವರ ಕವಿತೆಗಳ ಮೂಲಕ ಆಸ್ವಾದಿಸಿದ

ರೀತಿಯನ್ನು ಅರ್ಥಪೂರ್ಣವಾಗಿ ವಿಶ್ವೇಷಿಸಿದ್ದಾರೆ. ಇಲ್ಲಿಯ ವಿಶ್ಲೇಷಣೆ ಒಬ್ಬ ಜಾದುಗನ ಅತ್ಯಂತ ಮಧುರ ಭಾವನೆಗಳ ಅಭಿವ್ಯಕ್ತಿಯನವನ್ನಿಸದೇ ಇರದು.

**ಸೌಂದರ್ಯ ಸ್ಪರ್ಧೆ–ಒಂದು ಅವಲೋಕನ :**

ಈ ಲೇಖನದಲ್ಲಿ 'ಸೌಂದರ್ಯ ಸ್ಪರ್ದೆ' ಕವಿತೆಯು ಕವಿಯವರ ಕುರಿತು ಬರೆದ ಅನೇಕ ಕವಿತೆಗಳ ಕಣಜಲ್ಲೊಂದು ಹಾಗೆ ನೋಡಿದರೆ ಪ್ರಕೃತಿಯ ಸುಳಿವಿಲ್ಲದ ಕವಿತೆಯನ್ನು ಕಂವಿಯವರು ಬರೆದಿಲ್ಲ ಮಟ್ಟಿಗೆ ಎನ್ನುವಷ್ಟರ ಕವಿಯ ಯಾವುದೇ ಅಭಿವ್ಯಕ್ತಿಯಲ್ಲಿ ಪ್ರಕೃತಿಪ್ರೇಮವು ಅವಿಬಾಜ್ಯ ಅಂಗವೆಂಬುದನ್ನು ಅವರ ಕಾವ್ಯದಲ್ಲಿ ನಾವು ಕಂಡುಕೊಳ್ಳಬೇಕಾದ ಸತ್ಯ, ಪ್ರಕೃತಿಯ ಹಲವು ರೂಪ, ರಂಗ, ಅವಳ ಹಾವ ಭಾವ, ನೋವು–ನಲಿವು, ಹಾಸ್ಯ–ಲಾಸ್ಯ ಅವಳಲ್ಲಿಯ ಶೃಂಗಾರ, ಕರುಣ, ರೌದ್ರ, ಶಾಂತರಸ ಇತ್ಯಾದಿಗಳನ್ನು ಅದೆರಿಷ್ಟು ಮುಖಗಳಲ್ಲಿ ಬಣ್ಣಿಸಿದರೂ ಕವಿಮನ ತಣಿಯುವುದಿಲ್ಲ. ದೇವರನ್ನು ನಾನಾ ರೂಪದಲ್ಲಿ ಕಂಡು ಹಾಡಿ ಕುಣಿದ ಭಕ್ತನಂಥ ಆರಾಧನಾ ಭಾವವು ಕಣವಿಯವರ ಕಾವ್ಯದ ಒಂದು ಪ್ರಮುಖ ಗುಣ ಎಂದು ಮಾಲತಿ ಪಟ್ಟಣಶೆಟ್ಟಿಯವರು ಗುರುತಿಸಿದ್ದಾರೆ.

ಪ್ರತಿಮೆ, ಪ್ರತೀಕ, ರೂಪಕ, ಉಪಮೂಲಂಕಾರಗಳು ಪ್ರಕೃತಿಯ ನೂತನ ಆದರ್ಶಗಳನ್ನು ಪಡೆಯಬಲ್ಲ. ಮನುಷ್ಯನ ಜಗತ್ತಿನಲ್ಲಿಯ ಆಗುಹೋಗುಗಳು, ನಡೆನುಡಿ, ರೀತಿ–ನೀತಿಗಳಿಗೆ ಒರೆಗಲ್ಲು ಪ್ರಕೃತಿ, ಅವಳ ಇರುವಿಕೆ ಹಾಗೂ ಕಾರ್ಯ ವಿಧಾನಗಳನ್ನು ನಮ್ಮದರ ಜೊತೆಗೆ ಹೋಲಿಸಿದಾಗ ನಮ್ಮ ಸಣ್ಣತನ, ಸಂಕುಚಿತತೆ, ನಿಕೃಷ್ಟತೆಯ ಅರಿವಾಗುತ್ತದೆ. ಪ್ರಕೃತಿಯಲ್ಲಿ ತಪ್ಪು ಎಂದಿಗೂ ಘಟಿಸುವುದೇ ಇಲ್ಲ ಎಂಬ ಆತ್ಮವಿಶ್ವಾಸವು ಈ ಕವಿಗೆ ಇರುವುದರಿಂದ 'ಸೌಂದರ್ಯ ಸ್ಪರ್ದೆ' ಕವಿತೆಯಲ್ಲಿ ಮನುಷ್ಯ ಜಗತ್ತಿನಲ್ಲಿಯ ಸೌಂದರ್ಯ ಸ್ಪರ್ಧೆಯಲ್ಲಿ ಪ್ರಕೃತಿಯಲ್ಲಿ ಪ್ರತಿನಿತ್ಯ ಸಹಜವಾಗಿ ಉಕ್ಕಿ ಹರಿಯುವ ಸೌಂದರ್ಯ ರಾಶಿಯೊಂದಿನ ಹೋಲಿಕೆಯೇ ಲೇಖನದ ಮುಖ್ಯ ವಸ್ತುವಾಗಿದೆ.

**2. ಸ್ತ್ರೀಪರವಾದ ಧೋರಣೆಯ ಲೇಖನಗಳು**

**ಈ ಶತಮಾನದ ಮಹಿಳಾಕಾವ್ಯ**

ಪ್ರಸ್ತುತ ಲೇಖನವು ಈ ಶತಮಾನದ ಮಹಿಳಾಕಾವ್ಯಕ್ಕೆ ಸಂಬಂದಿಸಿದುದಾದ್ದರಿಂದ ಈ ಕಾಲಮಾನದಲ್ಲಿ ಮಹಿಳಾಕಾವ್ಯದಲ್ಲಿಯ ಸೃಜನಶೀಲತೆಯ ಗತಿಯನ್ನುನುಲಕ್ಷಿಸಿ ವಿವಿಧ ಹಂತಗಳಲ್ಲಿ ವಿಭಜಿಸಿಕೊಂಡು ಈ ಸಾಹಿತ್ಯ ನೆಡೆದು ಬಂದ ದಾರಿಯ ಒಂದು ಸ್ಥೂಲ ಪರಿಚಯವನ್ನು, ಅಗತ್ಯವಿದ್ದಡೆಗಳಲ್ಲಿ ಸ್ಥೂಲವಾದ ವಿಶ್ಲೇಷಣೆಯೊಂದಿಗೆ ಪ್ರಬಂಧದ ಇತಿಮಿತಿಗಳಲ್ಲಿ ಮಂಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಹನ್ನೊಂದನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆ ಬರುವಂತಹ ಕವಿಯತ್ರಿಯರು ಮಹಿಳಾ ಸಾಹಿತ್ಯಕ್ಕೆ ಸಂಬಂಧಿಸಿದ ಕಾವ್ಯಗಳಲ್ಲಿ ಬರುವ ವೈವಿಧ್ಯತೆ, ಸೃಜನಶೀಲತೆ, ಚಲನೆ ಶೀಲತೆಯ ದಾಖಲೆಯಿಂದಾಗಿ ಸಾಹಿತ್ಯ ಸಾರ್ವತ್ರಿಕತೆ ಸಾಧಿಸಿತು. ಇಷ್ಟದಿನ ಒಳಗೆ ಅದುವಿಕೊಂಡ ನೋವು–ನಲಿವುಗಳು, ಕನಸು–ಕಲ್ಪನೆಳು, ಅನುಭವ–ಅನುಭಾವಗಳು ತಮ್ಮರೊಚ್ಚು, ಕೆಚ್ಚನೊಂದಿಗೆ ಪ್ರಕಟವಾಗಿ ಸಾಹಿತ್ಯದ ಇನ್ನೊಂದು ಮುಖವು ಅನಾವಣಗೊಂಡಿದೆ ಎಂದು ಗುರುತಿಸುತ್ತಾರೆ.

**ಕನ್ನಡ ಕಾವ್ಯದಲ್ಲಿ ಪರಿವರ್ತನಗೊಳ್ಳುತ್ತಿರುವ ಮಹಿಳೆಯ ಚಿತ್ರ :**

ಪ್ರಸ್ತುತ ಲೇಖನದಲ್ಲಿ ಮಾಲತಿ ಪಟ್ಟಣಶೆಟ್ಟಿ ಅವರು ಸುಮಾರು ಒಂದು ಸಾವಿರ ವರ್ಷಗಳ ಕನ್ನಡದ ಕಾವ್ಯ ಇತಿಹಾಸವನ್ನು ಹೆಳೆಗನ್ನಡ, ನಡುಗನ್ನಡ, ನಡುಗನ್ನಡೋತ್ತರ, ಆಧುನಿಕ ಕನ್ನಡಪೂರ್ವ, ಆಧುನಿಕ ಕನ್ನಡೋತ್ತರ ಮತ್ತು ಸರ್ವಕಾಲಿಕವಾದ, ಜಾನಪದದ ಕಾವ್ಯ ಎಂದು ಆರು ಭಾಗಗಳಲ್ಲಿ ಸಾಹಿತ್ಯವನ್ನು ಅಳವಡಿಸಿಕೊಂಡ ಹೆಣ್ಣಿನ. ಸ್ಥಾನ–ಮಾನವನ್ನು ವಿವೇಚಿಸುತ್ತಾರೆ.

ಈ ಆರು ಭಾಗಗಳಲ್ಲಿ ಮಹಿಳೆಯ ಚಿತ್ರಣವನ್ನೂ ಭಿನ್ನ ಭಿನ್ನ ರೀತಿಯಲ್ಲಿ ಪರಿಶೀಲಿಸುತ್ತಾ ಹೋಗುತ್ತಾರೆ. 'ಹಳಗನ್ನಡದ ಸಂಪ್ರದಾಯಿಕ ಕಾಲ'ದಲ್ಲಿ ಹಳಗನ್ನಡದ ಕಾವ್ಯವನ್ನು ಸಂಪ್ರದಾಯಿಕ ವೆಂದೇ ಹೇಳಬೇಕು. ಇಲ್ಲಿ ಪಂಪ ಗಂಡು–ಹೆಣ್ಣುಗಳ ನಡುವೆ ತಾರತಮ್ಯವುಳ್ಳ ಸಂಬಂಧವನ್ನು ದೇಹಶಕ್ತಿಯಲ್ಲಿ ಕಂಡನಲ್ಲದೆ ಅಂತಃ ಶಕ್ತಿಯಲ್ಲಿಲ್ಲ ಅಂದಿನ ತಾರತಮ್ಯವುಳ್ಳ ಹೆಣ್ಣಿನ ಗೌಣ ಸ್ಥಾನದಿಂದ ಯಾಬ ಕವಿಯೂ ಮೇಲಕ್ಕೆತ್ತಲಿಲ್ಲ. ಇಂತಹ ಇಕ್ಕಾಟ್ಟಿನಲ್ಲಿಯೂ ರನ್ನನಂಥಕವಿ ತನ್ನ ' ಗದಾಯುದ್ಧ'ದಲ್ಲಿ ದ್ರೌಪತಿಯ ಬಾಯಿಂದ ಕ್ಷೇತ್ರಿಯ ಸಹಜ ಮಾತುಗಳನ್ನು ಅಡಿಸಿ ಬೆರಗುಗೊಳಿಸುತ್ತಾನೆ. ಎಂಬುದು ಗುರುತಿಸಿದ್ದಾರೆ. ಹಾಗೆಂತೇ ನುಡುಗನ್ನಡದ 12ನೇ ಶತಮಾನಲ್ಲಾದ ಸಮಾಜಿಕ ಕ್ರಾಂತಿಯು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದಲ್ಲಿ ಘಟನೆ ಶಿವಶರಣರು ತಂದ ಈ ಕ್ರಾಂತಿ ಅಂದಿನ ಸಾಂಪ್ರದಾಯಿಕ ಧರ್ಮಕ್ಕೆ ಬೇರೆ ತಿರುವನ್ನೆ ಕೊಟ್ಟಿತು. ಸಾಮಾಜಿಕ ತೀವ್ರ ಪರಿವರ್ತನೆಗೆ ಶರಣರು ಹೇಗೆ ಕಾರಣರಾದರೂ ಶಿವಶರಣಿಯರೂ ಹಾಗೇ ಕಾರಣವಾಗಿದ್ದರು. ಪ್ರತಿಯೊಬ್ಬ ಗೃಹಿಣಿ ಧಾರ್ಮಿಕ ಆಚರಣೆಯಲ್ಲಿ ಗಂಡನಷ್ಟೇ ಹಕ್ಕುಳ್ಳವಳಾಗಿದ್ದಳು. ಎಂದು ಗುರುತಿಸಿದ್ದಾರೆ.

ಹೀಗೆ ಕನ್ನಡ ಕಾವ್ಯ ಇತಿಹಾಸದ ಒಂದು ಸಾವಿರ ವರ್ಷಗಳ ಮಹಿಕಾ ಚಿತ್ರಣದಲ್ಲಿ ಪರಿವರ್ತನೆ ದಟ್ಟವಾಗಿ ಕಂಡದ್ದು ವೀರಶೈವ ಶಿವಶರಣರ ಸಾಮಾಜಿಕ ಕ್ರಾಂತಿಯ ಹನ್ನರಡನೆಯ ಶತಮಾನದಲ್ಲಿ ಮತ್ತಿ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಪ್ರಸ್ತುತ ಕಾಲದಲ್ಲಿ ಉಳಿದೆಲ್ಲ ಸುದೀರ್ಘಕಾಲ ಬರುವ ದಿನಗಳಲ್ಲಿ ಕನ್ನಡ ಕಾವ್ಯ ಮತ್ತೆ ಸಾಂಪ್ರದಾಯಿಕತೆಯುತ್ತಾ ವಾಲದಂತೆ ಸಾಹಿತ್ಯ ರಕ್ಷಿಸುವದು ಕ್ಷೇತ್ರದಲ್ಲಿ ಪ್ರಗತಿಪರ ಧೋರಣೆಯೊಂದಿಗೆ ಸ್ತ್ರೀಸಂವೇದನಾತ್ಮಕವಾದ, ಸ್ತ್ರೀ ವೈಶಿಷ್ಟಪೂರ್ಣ ಸಾಹಿತ್ಯ ನಿರ್ಮಾಣದಲ್ಲಿ ತೊಡಗುವದರಿಂದ ಸಂಪ್ರದಾಯಿಕ ಭೂತವನ್ನು ಓಡಿಸುವದಲ್ಲಿ ಸಹಾಯಕಾರಿಯಾಗಬಲ್ಲದು ಎಂಬ ಪರಿವರ್ತನೆಯನ್ನು ಈ ಲೇಖನದಲ್ಲಿ ಕಂಡು ಬರುತ್ತದೆ.

**ವೀರಶೈವಕಾಲೀನ ಮಹಿಳೆಯರ ಸ್ಥಾನಮಾನ**

ವೀರಶೈವ ಕಾಲವು ಒಂದು ವೈಶಿಷ್ಟ ಪೂರ್ಣವಾದ ಅಂತೆಯೇ ಎಂದೆಂದೂ ಮರೆಯಲಾಗದ ಮರೆಯಭಾರದ ಪರ್ವವಾಗಿದೆ. ಇಲ್ಲಿ 'ಹೆಣ್ಣು ಸಾಕ್ಷಾತ್ ಕಪಿಲಿಸಿದ್ಧು ಮಲ್ಲಿಕಾರ್ಜುನ' ಎಂದು ಶರಣ ಸಿದ್ಧರಾಮರು ಹೆಣ್ಣಿನ ಸ್ಥಾನವನ್ನು ದೈವತ್ವದಲ್ಲಿ ಕಂಡಿದ್ದಾರೆ. ಅಂದರೆ ವೀರಶೈವಕಾಲೀನ ಮಹಿಳೆಯರನ್ನು ಪೂಜ್ಯಭಾವನೆಯಿಂದ ನೋಡುವ ಗೌರವದದೃಷ್ಠಿ ಅವರ ವಚನಗಳಲ್ಲಿ ಸುಸ್ಪಷ್ಟವಿದೆ. ಆತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ಎಲ್ಲರಲ್ಲಿರುವ ಆತ್ಮ ಒಂದೇ. ಆತ್ಮ ಪರಮಾತ್ಮರ ಮಿಲಿನವಾಗಬೇಕು. ದುಷ್ಟಗುಣಗಳಳ್ಳಿಯಬೇಕು. ಮಾನವತೆ ಎತ್ತೆತ್ತಲೂ ರಾಜ್ಯವಾಳಬೇಕು, ಮಾನವರಲ್ಲಿಯ ದೈವತ್ವ ಹೊರಹೊಮ್ಮಬೇಕು. ಇದೇ ವೀರಶೈವ ಧರ್ಮದ ಗುರಿ. ಶರಣಸತಿ ಲಿಂಗಪತಿ ಎಂಬ ಭಾವ ತೆಳೆದು

ದೇವ–ಮಾನವರಲ್ಲಿ ತಾದತ್ಮ್ಯ ತರಬೇಕು ಎಂಬ ಈ ತತ್ವ ಸ್ತ್ರೀ ಪುರುಷರ ಸಮಾನತೆಗೆ ನಾಂದಿಯಾಯಿತು. ಎಂದು ಈ ಲೇಖನದಲ್ಲಿ ಲೇಖಕಿ ಗುರುತಿಸುತ್ತಾರೆ.

ವೀರಶೈವ ಧರ್ಮ ತಲೆತಲಾಂತರದಿಂದ ಇಂದಿಗೂ ಸನೇಕ ಆತಂಕಗಳಿಗೆ ದುರಾದರೂ ಉಳಿಯುತ್ತ ಬೆಳೆಯುತ್ತ ಬಂದಿದೆ. ವೇರಶೈವಧರ್ಮದ ಉಳಿವಿನಲ್ಲಿ ಮಹಿಳೆಯರ ಪಾತ್ರ ಹಿರಿದಾಗಿದೆ. ವೀರದಾನಿ ಗುಡ್ಡವ್ವ, ಶಿವಯೋಗದ ಶಿಖರವನ್ನೇರಿ ಆತ್ಮೋನ್ನತಿಯನ್ನು ಸಾಧಿಸಿದ್ದರೂ, ಜನ ಸಮುದಾಯಕ್ಕಿಳಿದು ಭಾರತದ ನಾಲ್ಕು ನಿಟ್ಟಿನಲ್ಲಿ ಸಂಚರಿಸಿ ತನ್ನ ಆತ್ಮ ಬಲದಿಂದ ತನ್ನ ಕತೃತ್ವ ಶಕ್ತಿಯಿಂದ ವೀರಶೈವಧರ್ಮದ ಪ್ರಚಾರ ಕೈಕೊಂಡಿದ್ದಳು ಮುಂಬರುವ ಪೀಳಿಗೆಗೂ ಹಾಕಿಕೊಟ್ಟಿದ್ದರಿಂದ ವೀರಶೈವಧರ್ಮ ಪ್ರಚಾರ ಕೈಕೊಂಡಿದ್ದಳು. ಮುಂಬರುವ ಪೀಳಿಗೆಗೂ ಹಾಕಿಕೊಟ್ಟಿದ್ದರಿಂದ ವೀರಶೈವ ಧರ್ಮ ತಲೆತಲಾಂತರದಿಂದ ಇಂದಿಗೂ ಅನೇಕ ಆಚರಣೆಗಳಿಗೆದುರಾದರೂ ಉಳಿಯುತ್ತ ಬೆಳೆಯುತ್ತ ಬಂದಿದೆ. ವೀರಶೈವಧರ್ಮದ ಉಳಿವಿನಲ್ಲಿ ಮಹಿಳೆಯರ ಪಾತ್ರ ಹಿರಿದಿ ಎಂದು ಮಾಲತಿ ಪಟ್ಟಣಶೆಟ್ಟಿ ಅವರು ಲೇಖನದಲ್ಲಿ ಉಲ್ಲೇಖಿಸುತ್ತಾರೆ.

**ಲೇಖಕಿಯರ 1987 ಕಾವ್ಯ–ಒಂದು ಸಮೀಕ್ಷೆ**

ಪ್ರಸ್ತುತ ಲೇಖನದಲ್ಲಿ ಮಾಲತಿ ಪಟ್ಟಣಶೆಟ್ಟಿ ಅವರು ಶ್ರೀಮತಿ ಬಿ. ಓ. ಲಲಿತಾ ನಾಯಕ್ ಶ್ರೀಮತಿ ಎಚ್.ಎಸ್. ಮುಕ್ಕಾಯಕ್ಕ, ಶ್ರೀಮತಿ ವಿ. ಆರ್. ಪ್ರತಿಭಾ, ಶ್ರೀಮತಿ ಸುಕನ್ಯಾಮಾರುತಿ ಮತ್ತು ಹೇಮಾರ ತಮ್ಮ ಕಾವ್ಯಗಳಲ್ಲಿ ಮಹಿಳಾ ವಿಚಾರ ಧಾರೆಗಳನ್ನು ಕುರಿತು ಗುರುತಿಸಿದ್ದಾರೆ. ಅಲ್ಲಿ ಬರುವಂತಹ ಸಾಮಾಜಿಕ ಧೋರಣೆ, ಸ್ತ್ರೀಪರ ಧೋರಣೆ, ಸಾಹಿತ್ಯಕ ಹಾಸ್ಯ ಪ್ರಜ್ಞೆ ಮತ್ತು ಕಾಮ, ಪ್ರೇಮ, ವಿರಹಗಳನ್ನು ಕುರಿತು ವಿವೇಚಿಸಿದ್ದಾರೆ.

ಪ್ರಸ್ತುತ ಸಾಮಾಜಿಕ ಜೀವನದಲ್ಲಿ ವಿಕೃತಿಗಳನ್ನು ವಿಕೃತಿಗಳನ್ನು ಹುಟ್ಟಿ ಶೋಷಣೆಯನ್ನು ಪೋಳ್ಳುತನ, ಮೋಸ, ಡಾಂಭಿಕತನಗಳನ್ನು ಕಂಡ ಮೇಲಿನ ಕವಯಿತ್ರಿಯರು ರರ್ಜಿಸುತ್ತಾರೆ. ಸರಸ್ವತಿ ಸ್ತ್ರೀ ಪಕ್ಷಪತಿ ಹಣ್ಣಿನ ಎಲ್ಲಾದರೂ ಅನ್ಯಾಯವಾದರೆ ಅಲ್ಲಿ ಉರಿದೇಳುವ ಸಾತ್ವಿಕ ರೋಷವಿದೆ. ರಾಮಾಯಣ, ವಿಶೇಷವಾದಿ ಮಹಾಭಾರತದ ಪ್ರತಿಮೆ ಸಂಕೇತಗಳು ಔಚಿತ್ಯ ಮೀರಿ ಪ್ರಯೋಗಿಸಲ್ಪಟ್ಟಿವೆ. ಅನಾದಿ ಕಾಲದಿಂದ ಅನ್ಯಾಹತನಾಗಿ ಬಲಿ ಪಶುವಾದ ಹೆಣ್ಣಿನ ನೋವನ್ನು ಅಲ್ಲಲ್ಲಿ ತೊಡಿಕೊಂಡಿದ್ದಾರೆ. ಆನಪದ ಭಾಷೆಯ ಸೋಗಡನ್ನು ಹಿತಮಿತವಾಗಿ ಬಳಸಿದ್ದಾರೆ. ಎಂದು ಈ ಲೇಖನದಲ್ಲಿ ಲೇಖಕಿ ಗುರುತಿಸುತ್ತಾರೆ.

**ಉತ್ತರ ಕರ್ನಾಟಕದ ಲೇಖಕಿಯರ ಕೆಲವಯ ಸಮಸ್ಯೆಗಳು ಪರಿಹಾರ**

ಮಾಲತಿ ಪಟ್ಟಣಶೆಟ್ಟಿ ಅವರು ಉತ್ತರಕರ್ನಾಟಕದ ಲೇಖಕಿಯರ ಸಮಸ್ಯೆಗಳು ಯಾವ ರೀತಿಯಲ್ಲಿ ಬಗ್ಗೆ ಹರಿಸಿಕೊಳ್ಳಬೇಕೆ ಎಂಬುದು ಈ ಲೇಖನದ ಉದ್ದೇಶವಾಗಿದೆ. ಉತ್ತರಕರ್ನಾಟಕ ಸಂಘ ಸಂಸ್ಥೆಗಳಿಂದ ಲೇಖಕಿಯರ ಸಂಘಟನೆಯಿಂದ ಸಂಘಸಂಸ್ಥೆಗಳಿಂದು ಬಹುಮುಖ ರೀತಿಯಲ್ಲಿ ಸಮಸ್ಯೆಗಳನ್ನು ಪರಿಹರಿಸಬಹುದು. ನಮ್ಮ ಲೇಖಕಿಯರು ಸಂಘಟಿತರಾದರೆ ತಮ್ಮ ಸಾಮಾನ್ಯ ಸಮಸ್ಯೆಗಳನ್ನು ಸಾಮಾಜಿಕ ಪ್ರಯತ್ನದಿಂದ ಬಗೆಹರಿಸಿಕೊಳ್ಳಬಹುದು. ಒಗ್ಗಟ್ಟೇ ಬಲ ಎಂಬ ಪಾಠವನ್ನು ತಿಳಿದು ಕೊಂಡು, ಇಂಥ ಸಂಘಟನೆ ಇದ್ದರೆ ತಮ್ಮ ಸ್ವಂತದ ಸಾಹಿತ್ಯಕೃತಿಗಳನ್ನು, ವಿಮರ್ಶೆಕೃತಿಗಳನ್ನು, ಕವನಗಳನ್ನು ಚರ್ಚಿಸುತ್ತ ತೊಡಗಿಸಿ ತಮ್ಮ ಕುಂದು–ಕೊರತೆಗಳನ್ನು ನೀಗಿಸಿ ಸತ್ವಯುತ ಸಾಹಿತ್ಯವನ್ನು ಹೊರತರಲು

ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ ಅನೇಕ ವಿದ್ವಾಂಸರನ್ನು ಪ್ರಸಿದ್ದ ಲೇಖಕ ಲೇಖಕಿಯರನ್ನು ನಾಡಿನ ಬೇರೆ ಬೇರೆ ಭಾಗಗಳಿಂದ ಅಹ್ವಾನಿಸಿ ಅವರಿಂದ ಜ್ಞಾನ, ವಿದ್ವತ್ತು, ಮಾರ್ಗದರ್ಶವನ್ನು ಪಡೆಯಬಹುದು ಎಂದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ಜಾನಪದ ಸಾಹಿತ್ಯ ಹಾಗೂ ಮಹಿಳಾ ಸಮಸ್ಯೆ**

ಜಾನಪದ ಹಾಡುಗಳಲ್ಲಿ ಜನಪದರು ತಮ್ಮ ಸಮಸ್ಯೆಗಳನ್ನು ಆಡಿದ್ದನ್ನೇ ಹಾಡುವ ಕಿಸಬಾಯಿದಾಸ ಎಂಬಂತೆ ದಿನನಿತ್ಯ ಸಮಸ್ಯೆಗಳನ್ನು ಸ್ತ್ರೀ ಎದುರಿಸುತ್ತಿದ್ದಾಳೆ ಎಂದು ಈ ಲೇಖನದ ಮುಖ್ಯ ಉದ್ದೇಶವಗಿದೆ.

ಹೆಣ್ಣು ತನ್ನ ಹಲವು ಶತಮಾನಗಳಿಂದ ಹೆಣ್ಣು ಜನ್ಮವೇ ಕಷ್ಟಕ್ಕೆ ಹುಟ್ಟಿದ್ದು. ಅದು ಒಂದು ಶಾಪವಿದ್ದಂತೆ ತಿಳಿದು ಅತ್ತೆಯ ಮನೆಯಲ್ಲಿ ಅವರ ಎಲ್ಲ ಅನ್ಯಾಯಗಳನ್ನು ಪ್ರತಿಭಟಿಸಿದೆ ಸಹಿಸಬೇಕು ಅವುಗಳನ್ನು ಸಹಿಸದಾಗಲೇ ಹೆತ್ತವರಿಗೆ ಹೆಸರು ಬರುತ್ತದೆ ಎಂದು ಅನ್ಯಾಯ ಕ್ರಮಗಳ ಸ್ವೀಕೃತಭಾವವಾಗಿ ಇಂದು ಸಮಾಜದಲ್ಲಿ ಕಾಣುತ್ತವೆ.  ಹುಟ್ಟಿದ ಹೆಣ್ಣು ಮಗುವಿನ ಜನನ ಬಗೆಗೆ ಇದ್ದ ನಿಕೃಷ್ಟ ಭಾವದ ಲಿಂದ ತಾರತಮ್ಯ ಅಂದಿನ ಸಮಾಜದಲ್ಲಿತ್ತು ಎಂದು ಗುರುತಿಸುತ್ತವೆ. ಇನ್ನೂ ಬಂಜೆತನದ ವೈಜ್ಞಾನಿಕ ಸತ್ಯಾಗಳನ್ನು ತಿಳಿದು ಮೇಲೂ ಇಂದಿಗೂ ಬಂಜೆ ಹೆಣ್ಣನ್ನು ನೋಡುವ ದೃಷ್ಠಿ ಬದಲಾಗಿಲ್ಲ. ದೇವರ ಸೃಷ್ಠಯಲ್ಲಿ ಅಂಗವಿಕಲತೆ ಇದ್ದಂತೆ ಬಂಜೆತನ ಆ ಹೆಣ್ಣಿನ ತಪ್ಪಲ್ಲದಿದ್ದರೂ ಕುಟುಂಬಗಳಲ್ಲಿ, ಸಮಾಜದಲ್ಲಿ ಬಂಜೆಯನ್ನು ಕೀಳಾಗಿ ನೋಡುವ ದೃಷ್ಟಗಳನ್ನು ಈ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಹೀಗೆ ಹೆಣ್ಣಿನ ಸರಳತೆ, ಮುಗ್ಧತೆ, ಆಸಹಾಯಕತೆಗಳನ್ನು ಬಳಸಿಕೊಂಡ ಹೆಣ್ಣನ್ನು ಅಳಿದ ಪರುಷ ಆಕೆಯ್ನು ಗುಮಾಳನ್ನಾಲಾ ಮಾಡಿಕೊಂಡಿದ್ದಾನೆ. ಎಂದು ಈ ಲೇಖನದಲ್ಲಿ ಗುರುತಿಸುತ್ತಾರೆ.

**ಮಹಿಳೆಯರ ಇಂದಿನ ಸಮಸ್ಯೆಗಳು**

ಸ್ತ್ರೀಯ ಸಮಸ್ಯೆಯನ್ನು ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರು ಬಹುಮುಖ ರೀತಿಯಲ್ಲಿ ವಿವರಿಸಿದ್ದಾರೆ, ಇಂದಿನ ಸ್ತ್ರೀಯ ಸಮಸ್ಯೆಗಳನ್ನಯ ಬಗೆಹರಿಸಲು ಸ್ತ್ರೀಯರಂತೆ ಪುರಷರು ಮುಂದಾಗಬೇಕು. ಸ್ತ್ರೀ ಪುರುಷರ ಒಬ್ಬರನ್ನೊಬ್ಬರೂ ತಿಳಿದುಕೊಳ್ಳದಿದ್ದರೆ. ವಿರಸ ಪ್ರಾರಂಭ, ಮನೆಯಲ್ಲಿ ಬಹುಮುಖ ಸಮಸ್ಯೆಗಳು ಸ್ತ್ರೀಯ ಪಾತ್ರ ಮುಖ್ಯವಾಗಿರುತ್ತದೆ ಎಂದು ಈ ಲೇಖನದಲ್ಲಿ ಕಂಡುಬರುತ್ತದೆ.

ಇಂದು ಸ್ತ್ರೀಗೆ ಸಮಾಜದಲ್ಲಿ ಬರುವಂತ ಸಮಸ್ಯೆಗಳು ಬಹುಮುಖವಾಗಿರುತ್ತವೆ. ಬಾಲವಿವಾಹ, ವರದಕ್ಷಿಣೆ, ದೇವದಾಸಿ ಇತ್ಯಾದಿಗಳನ್ನು ಒಳಗೊಂಡಿದೆ ಬಾಲವಿವಾಹ ಇಂದು ಮದುವೆ ದೃಷ್ಟಿಯಿಂದಲೂ, ಒಂದು ಅಪರಾಧಿ ಮಗು ಚಿಕ್ಕದಿದ್ದಾಗ ತನ್ನ ಜೀವನ ಸಂಗಾತಿಯನ್ನು ಗುರುತಿಸಲು ಅಸಮಾಧಾನ, ಅಂಥ ಸ್ಥಿತಿಯಲ್ಲಿ ಚಿಕ್ಕ ಮಕ್ಕಳಿಸಿಗಾಗಿ ಮದುವೆಯ ಮಾಡಿ, ವಯಸ್ಸಿಗೆ ಬಂದಾಗ ಅವರು ಒಬ್ಬರನ್ನೊಬ್ಬರು ಕೆಲವು ಕಾರಣಗಳಿಂದ ಸೇರಲಿಕ್ಕಿಲ್ಲ, ಇವರಿಂದ ಕುಟುಂಬಗಳು ಹಾಳಾಗುತ್ತವೆ. ಇಂತಹ ಸಮಸ್ಯೆಯಲ್ಲಿ ಸ್ತ್ರೀಯು ತಬಲಿವಾಗುತ್ತಾಳೆ. ಈ ಕಡೆ ಗಂಡನ ಮನೆಯಲ್ಲಿ ಸೇರುವುದಿಲ್ಲ. ತಂದೆತಾಯಿ ಸೇರಿಯುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯು ಎಲ್ಲಿಗೆ ಹೋಗಬೇಕು ಎಂಬುದು ಈ ಲೇಖನದ ಪ್ರಶ್ನೆಯಾಗಿದೆ. ಹೀಗೆ ಇನ್ನೂ ಪರದಕ್ಷಣೆ ಸಮಸ್ಯೆಯಂತೂ ಪ್ರಪಂಚದಲ್ಲಿ ನೂರಕ್ಕೆ ಯಪ್ಪತ್ತೈದರಷ್ಟು ವರದಕ್ಷಣೆಯಿಂದ ಸ್ತ್ರೀ ಬಲಿಯಾಗುತ್ತಾಳೆ. ನಾದಿನಿ, ಅತ್ತೆ, ಮಾವ ಇತ್ಯಾದಿ ಕಿರುಕುಳಗಳು ಸ್ತ್ರೀಯರಲ್ಲಿ ಕಂಡು ಬರುತ್ತವೆ. ಹೀಗೆ ಸಮಾಜದಲ್ಲಿ ಸಮಸ್ಯೆ ಇಲ್ಲದೆ ಸ್ತ್ರೀ ಇಲ್ಲ ಎನ್ನುವ ಮಾತನ್ನು ಲೇಖಕಿಯರು ಅಭಿಪ್ರಾಯ ಪಡುತ್ತಾರೆ.

ಬಿಸಿಲು, ಬಿರುಗಾಳಿ, ಬರಗಾಲಗಳಿಗೆ ಸಿಲುಲಿ ಸಲಿಗಿದರೂ, ಚಿಗುರಿನ ಸಸಿಯಂತೆ ಜೀವನ ವಿರೋದಿ ಶಕ್ತಿಗಳೊಂದಿಗೆ ಸಂಘರ್ಷ ನಡೆಸಬೇಕಾದ ಅನಿವಾರ್ಯತೆ ಅವರ ಸೃಜನಶೀಲತೆಗೆ ಪ್ರೇರಣೆಯಾಗಿ ನಿಲ್ಲಬಲ್ಲದು. ಸಮಾಜದ ಸಂಪ್ರದಾಯದ್ದ ಸಂಕುಚಿತ ವಾತಾವರಣದಲ್ಲಿ ಬೆಳೆದು ತಮ್ಮ ತಂದೆ, ತಾಯಿ, ಸೋದರ, ಸೋದರಿ, ಅತ್ತೆ, ಮಾವ, ಪತಿ ಶೋಷಣೆಗೆ ತುತ್ತದಾರೆ ಇನ್ನೊಂದಡೆ ಇವರಿಗೆ ಸಹಾಯಕಯಾಗಿ ನಿಲ್ಲುವ ಇಂಥ ಶೋಷಣೆಗೆ ದಿವ್ಯ ನಿರ್ಲಕ್ಷ ತೋರುವ, ಅನ್ಯಾಯಗಳಿಗೆ ಸ್ಪಂದಿಸದ ಹೃದಯಹೀನ ಸಮಾಜವಿದ್ದರೆ, ಇನ್ನೊಂದಡೆ ಜೀವನದ ಕೆಲವು ದುರದೃಷ್ಟಕರ ಘಟನೆಗಳೂ ಇರುತ್ತವೆ ಎಂದು ಎತ್ತಿಹಿಡಿದ್ದಾರೆ. ಕ್ರೂರ ಪರಿಸರದೊಂದಿಗೆ ಸೆನಸುತ್ತ ತಮ್ಮ ನೋವು, ನಲಿವುಗಳ ಎಳೆಗಳಲ್ಲಿ ತಮ್ಮ ಬರಗಗಳನ್ನು ನೇಯ್ದಿದ್ದಾರೆ.

ಹೀಗೆ ತಮ್ಮ ದೋಷ ಮುಕ್ತವೆಂದರೂ ಹೇಳುವ ಹೇಳಲಾಗದ, ಹೇಳಬಾರದ ಅದೇಷ್ಟೋ ಬದುಕಿನ ಅಂಶಗಳು ಉಳಿದು ಹೋಗುತ್ತವೆ, ಬಾಗಿಲು ಕಿಟಕಿಗಳಿಲ್ಲದ ಒಂದು ಕತ್ತಲು ಕೋಣೆಯ ನೆತ್ತಿಯ ಮೇಲಿನ ಒಂದು ಬೆಳಕಿಂಡಿ, ಅದೇಷ್ಟು ಬೆಳಕು ಚೆಲ್ಲೀತು? ಮಾಲೆಗಳಲ್ಲಿ ರಾಶಿ ರಾಶಿಯಾಗಿ ಬಿದ್ದ ಕತ್ತಲೆಯನ್ನು ಅದೇಷ್ಟು ಕಳೆದೀತು? ಎಂಬ ಇತಿಮಿತಿಯೊಂದಿಗೆ ಇಂದಿನ ಸಂವಾದಕ್ಕೆ ಪೂರ್ವಭಾವಿಯಾಗಿ 'ಪರಿಸರ ಮತ್ತಿ ಮಹಿಳೆ' ಎಂಬ ಈ ಲೇಖನದಲ್ಲಿ ತಮ್ಮ ವ್ಯಯಕ್ತಿಕ ಜೀವನದ ಕೆಲ ಅಂಶಗಳನ್ನು ನೆನಪು ತೆರೆದಿಕೊಂಡಂತೆ ನಿವೇದಿಸಲು ಪ್ರಯತ್ನಿಸಿದ್ದಾರೆ.

**3. ಸಾಂಸ್ಕೃತಿಕ ಲೇಖನಗಳು (ಸಾಂಧರ್ಬಿಕ ಲೇಖನಗಳು)**

**ಕೃಷಿಕರ ಸಂಭ್ರಮದ ಹಬ್ಬ ಮಣ್ಣೆತ್ತಿನ ಅಮವಾಸ್ಯೆ**

ಮಾಲತಿ ಪಟ್ಟಣಶೆಟ್ಟಿ ಅವರು ಜನಪದರು ಕೃಷಿಕರ ಸಂಭ್ರಮದ ಮೇಲೆ ಒಂದು ಪಕ್ಷಿನೋಟ ಬೀರಿದ್ದಾರೆ. ತಮ್ಮ ಸಡಗರ ಸಂಭ್ರಮದಲ್ಲಿ ಸಂಪ್ರದಾಯವನ್ನು ಯಾವ ರೀತಿಯಲ್ಲಿ ಮಣ್ಣೆತ್ತಿನ ಪೂಜೆಯನ್ನು ಕೈಗೊಳ್ಳುತ್ತಾರೆ ಎಂದು ಈ ಲೇಖನದಲ್ಲಿ ಗುರುತ್ತಿಸಿದ್ದಾರೆ.

ಸೂರ್ಯನ ಬಿಸಿಲಲ್ಲಿಡಗಿದ ಸೃಜನ ಶಕ್ತಿಯನ್ನು ಹೀರಿಕೊಂಡು ಭೂದೇವಿ, ಮಳೆಗಾಲದ ಮಳೆಗಾಗಿ ಬಾಯಾರಿ ಕಾಯುತ್ತಾಳೆ. ಮೊದಲ ಮಳೆಗೆ ತಣೆದು ತನ್ನ ಪರಿಮಳವನ್ನು ಹರಡಿ ಮಣ್ಣಿನ ಮಗನ ಬೆವರ ಹನಿಗಾಗಿ, ತನ್ನ ಕೃಷಿಕ ಬದುಕಿನ ಜೀವನದ ಗೆಳೆಯರಂತಿದ್ದ ಜೋಡು ಎತ್ತುಗಳನ್ನು ಹೂಡಿ  ರಂಟೆ, ಕುಂಟೆ ಹೊಡೆದು ನೆಲಹರಗಿ ಸಾಲುಮಾಡಿ ಬೀಜ ಬಿತ್ತುವುದೇ ತಡ–ಭೂದೇವಿ ಅಖಂಡ ರೈತರು ಒಂದೊಂದು ಬೀಜಕ್ಕೆ ನಲಿಯುತ್ತಾರೆ. ಮೃಗಶಿರ ಮಳೆ ತರುವ ಕಪ್ಪು ಮೋಡಗಳ ಮರೆಗೆ ಚಲ್ಲಾಟ ಆಡುವ ಚಂದ್ರನ ಕಾರುಹುಣ್ಣಿವೆಯ ಬೆನ್ನಿಗೆ ಹತ್ತಿಕೊಂಡೇ ಬರುವ ಅಮವಾಸ್ಯೆಯೇ ಮಣ್ಣೆತ್ತಿನ ಅಮವಾಸ್ಯೆ ಮಣ್ಣಲ್ಲಿ ಮಣ್ಣಾಗಿ ದುಡಿಯಬೇಕಾದ ತನ್ನ ಬದುಕಿನ ಹೆಗಲು ಕೊಟ್ಟು ದುಡಿಯುವ ಎತ್ತುಗಳನ್ನು ಕೃಷಿಕರು ತಮ್ಮ ಪರಮ ದೈವತವೆಂಬಂತೆ ಪೂಜಿಸುವದು ಗುರುತಿಸುತ್ತಾರೆ.

**ಬದಲಾಗುತ್ತಿರುವ ಸಂಪ್ರದಾಯಗಳು ಮತ್ತು ಮಡಿವಂತಿಕೆ**

ಸಂಪ್ರದಾಯಗಳೆಂದರೇನು ಎನ್ನುವದು ಇಲ್ಲಿಯ ಮುಖ್ಯ ಪ್ರಶ್ನೆಯಾಗಿದೆ. ಸಮಾಜದಲ್ಲಿ ಜನರು ಒಂದು ಕಾಯಿದೆ. ಕಾನೂನು, ನೀತಿ, ಸಂಹಿತೆ, ನಡುವಳಿಕೆ ಸಮಾಜದಲ್ಲಿ ಸ್ವಚ್ಚೆ, ಅನಾಚಾರ, ಅವ್ಯವಸ್ಥೆ ಅರಾಜಕತೆಗಳನ್ನು ಹೋಗಲಾಡಿಸಿ ಹಾಕಿಕೊಂಡ ಕಾನೂನು ಕಟ್ಟುಗಳನ್ನು ಈ ಲೇಖನದಲ್ಲಿ ಎತ್ತಿಡಿದಿದ್ದಾರೆ.

ಕೆಲವು ನೀತಿ ನಿಯಮಗಳ ಬಗ್ಗೆ ನಡುವಳಿಕೆಗಳ ಬಗ್ಗೆ ನೀಡಿದ ಮಹಾಕಾವ್ಯಗಳು, ಉಪನಿಷತ್ತುಗಳು, ಪುರಾಣ ಗ್ರಂಥಗಳು, ಪುರುಷರಿಂದ ಹಾಗೂ ಕೆಲವೇ ವಿದ್ವಾಂಸರ ಅಭಿಪ್ರಾಯ ನಿರ್ಧರಿಸಲ್ಪಟ್ಟ ಕೆಲವು ಗ್ರಂಥಗಳಲ್ಲಿ ಬರೆಯಲ್ಪಟ್ಟುನಡುವಳಿಕೆಗಳನ್ನು ಗುರುತಿಸುತ್ತಾ, ಹೆಣ್ಣು ಗಂಡಿನ ನಡುವಿನ ಅಸಮಾನತೆ, ಹೆಣ್ಣಿಮಕ್ಕಳ ಶಿಕ್ಷಣ ವಿಚಾರ, ಬಾಲ್ಯ ವಿವಾಹ, ವಿದ್ಯಾರ್ಥಿ ದುರಸ್ಥಿತಿ, ಸತಿ–ಪದ್ದತಿ, ಬಹುಪತ್ನಿತ್ವ, ಅಂತರ್‌ಜಾತಿ ವಿವಾಹ, ಮೂಡನಂಬಿಕೆಗಳು, ವರದಕ್ಷಣೆ, ಹೀಗೆ ಮತ ಚಲಾಯಿಸುವ ಹಕ್ಕು ಇತ್ಯಾದಿಗಳನ್ನು ಸರಿಸಮಾನತೆ ರೀತಿಯಲ್ಲಿ ಗುರುತಿಸಿ 18ನೇ ಮತ್ತು 19ನೇ ಶತಮಾನದಲ್ಲಿ ಆದ ಸ್ಥಿತ್ಯಾಂತರ ಬದಲಾವಣೆ ಯಾವರೀತಿಯಲ್ಲಿ ಬೆಳಕಿಗೆ ಬಂದಿದೆ ಎಂದು ಉಲ್ಲೇಖಿಸುತ್ತಾರೆ.

**ಒಂಟಿ ಪಾಲಕರ ಸಮಸ್ಯೆಗಳು :**

ಪ್ರಸ್ತುತ ಲೇಖನದಲ್ಲಿ ಲೇಖಕಿಯರು ಮನುಷ್ಯನ ಜೀವನದಲ್ಲಿ ಒಂಟಿಯಾಗಿ ಯಾಚ ರೀತಿಯ ಸಮಸ್ಯೆಗಳ ಎದುರಾಗುತ್ತವೆ. ಮತ್ತು ಒಂಡು ಕುಟುಂಬದಲ್ಲಿ ಅವುಗಳನ್ನು ಯಾವ ರೀತಿಯಲ್ಲಿ ಸರಿಸಮಾನವಾಗಿ ಎದರಿಸಬೇಕು ಎಂಬುದು ಗುರುತ್ತಿಸುತ್ತಾರೆ.

ಕಳೆದ ಐದಾರು ದಶಕಗಳಲ್ಲಿ ವೈಜ್ಞಾನಿಕತೆ ಹಾಗೂ ಶಿಕ್ಷಣದ ಪ್ರಚಾರದಿಂದಾಗಿ ಸ್ತ್ರೀ–ಪುರುಷರು ಸಮಾನ ಶಿಕ್ಷಣ ಅವಕಾಶ ಹಕ್ಕು ಜವಾಬ್ದಾರಿಗಳನ್ನು ಅರಿತಿದ್ದರ ಫಲವಾಗಿ ಇಂದು ಮಹಿಳೆ ಪುರುಷನ ಶೌರ್ಯ, ಶೋಷಣೆಳನ್ನು ಸಹಿಸಲು ಸಿದ್ಧಳಿಲ್ಲ. ಹೀಗಾಗಿ ಸಾವಿರಾರು ವರ್ಷಗಳಿಂದ ನಿರ್ಮಿತವಾದ ಪುರುಷ ಪ್ರಧಾನ ಸಮಾಜದ ಪಂಜರದಿಂದ ಸ್ತ್ರೀ ಹೊರ ಬರುತ್ತಿದ್ದಾಳೆ ಹೀಗಾಇ ಗಂಡ–ಹೆಂಡತಿ ಒಬ್ಬರಿಂದ ಒಬ್ಬರು ದೂರವಾಗುತ್ತಿದ್ದಾರೆ. ಯೂರೋಪ, ಅಮೇರಿಕಾ ದೇಶಗಳಲ್ಲಂತೂ ಕುಟುಂಬಗಳಲ್ಲಿಯ ಬೀರುಕು ಸರ್ವೆ ಸಾಮಾನ್ಯ ತಾಯಿ–ತಂದೆಗಳ ಪ್ರೀತಿ ರಕ್ಷಣೆ ನಿಗದ ತರುಣ ಜನಾಂಗ ಇಂದು ಬ್ರೌನ್‌ಶುಗರ, ಹೆರೊಯಿನ್ ಚಟಕ್ಕೆ ಬಲಿಯಾಗಿ ದಾರಿದಾರಿ ಅಲೆಯುತ್ತಿದ್ದಾರೆ. ಅಮೇರಿಕಾ, ಯೂರೋಪದ ಒಟ್ಟು ಜನಸಂಖ್ಯೆಯ ಮೂರರಲ್ಲಿ ಒಂದು ಭಾಗದ ಜನ ಒಚಿಟಿ ಪಾಲಕರಿದ್ದಾರೆ ಅದೆಷ್ಟು ನಿಗ್ರೊಲಿ ಹೆಣ್ಣಮಕ್ಕಳು ಬಳಿಯರ ಅತ್ಯಾಚಾರಕ್ಕೆ ಒಳಗಾಗಿ ಮಕ್ಕಳನ್ನು ಹೆತ್ತು ಒಂಟಿ ಪಾಲಕರಾಗಿ ಹೋರಾಡುತ್ತಿದ್ದಾರೆ. ಈ ಹಸುಳೆಗಳ ಬಿಳಿ ತಂದೆಗಳು ಮತ್ತಿ ತಂದೆತನವನ್ನು ಗಾಳುಯಲ್ಲಿ ತೂರಿ ಜಾರಿಕೊಂಡಿದ್ದಾರೆ. ಹೀಗೆ ಅಮೇರಿಕಾ, ನಿಗ್ರೋಗಳ ಮಿಶ್ರ ಸಂತತಿಯರಿ ಮಕ್ಕಳ ಬಾಳು ಆ ಸಮಾಜದ ಒಂದು ಗೋಳಿನ ಕತೆ ಎಂದು ಗುರುತಿಸಲಾಗಿದೆ.

**ಎಂದು ಮರೆಯಲಾಗದ ಸ್ವಾತಂತ್ರ್ಯ ದೇವಿಯ ಮೂರ್ತಿ :**

ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರು ಸ್ವಾತಂತ್ರ ದೇವಿಯ ಮೂರ್ತಿ ಮೇಲೆ ಪಕ್ಷಿನೋಟ ಬೀರುದ್ದಾರೆ. ಆ ದೇಶದಲ್ಲಿಯ ಆರುತಿಂಗಳ ತನ್ನ ಜೋತೆಗೆ ಇದ್ದ ಮಗ, ತಂಗಿಯ ನೆನಪುಗಳು, ವಾಸ್ತವ್ಯಗಳಯ ಕಂಡು ಕೊಂಡು ನಿಸರ್ಗ ತಾಣಗಳು, ಸುಂದರ ಪಟ್ಟಣಗಳು, ವಸ್ತು ಸಂಗ್ರಹಾಲಯಗಳು, ಅಲ್ಲಿಯ ಉತ್ಸವ ಜಾತ್ರೆಗಳ ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಲವಾರು, ಇವುಗಳ ಅನುಭವಗಳನ್ನು ನೆನಪಿನ ಚೀಲಗಳಲ್ಲಿ ಒತ್ತೊತ್ತಿ ತುಂಬಿಕೊಂಡು ಇನ್ನೊಂದು ಸಾಂಸ್ಕೃತಿಯ ಬದುಕಿನ ತೋರಿಸುವ ಛಲಗಾರಿಕೆಯನ್ನು ಈ ಲೇಖನದಲ್ಲಿ ತೋರಿಸಿದರೆ.

**ಮಾತ್ರ ದೇವೋಭವ–ಒಂದು ವಿವೇಚನೆ :**

ಶ್ರೀಮತಿ ಮಾಲತಿ ಪಟ್ಟಣಶೆಟ್ಟಿಯವರು 'ತಾಯಿ' ಎನ್ನುವ ಶಬ್ದವನ್ನು ಬಹುಮುಖ ರೀತಿಯಲ್ಲಿ ವರ್ಣಿಸಿದ್ದಾರೆ. ಸಾಹಿತ್ಯ ಲೋಕದಲ್ಲಿ ತಾಯಿಯನ್ನು ಪ್ರೀತಿಸಿ, ನೆನೆದು ಕೃತಜ್ಞತೆ ಸಲ್ಲಿಸಿದ ಕವಿಗಳನ್ನು ಈ ಲೇಖನದಲ್ಲಿ ಗುರುತಿಸಲಾಗಿದೆ.

ಇಲ್ಲಿ "ಮಾತೃ ದೇವೋಭವ" ಎಂಬ ಆದೇಶವು ಉಳಿದೆಲ್ಲ ಆದೇಶಗಳಿಗೆ ಅಗ್ರಸ್ಥಾನದಲ್ಲಿದ್ದುದು ಗಮನಾರ್ಹ ಇದರೊಂದ ತಾಯಿಗೆ ಕುಟುಂಬದಲ್ಲಿ ಎಂಥ ಸ್ಥಾನವಿತ್ತು, ಎಂಬುದರ ಪರಿಕಲ್ಪನೆ ಬರುತ್ತದೆ. ತಾಯಿಯನ್ನು ದೇವರೆಂದು ತಿಳಿ ಎಂಬುದು ಇದರ ಅರ್ಥವಾಗಿದೆ ಎಂದು ಹೇಳುತ್ತಾ ಅದರಂತೆಯೇ ತಂದೆಯನ್ನು ದೇವರೆಂದು ತಿಳಿ, ಗುರುಗಳನ್ನು ದೇವರೆಂದು ತಿಳಿ, ಅತಿಥಿಯನ್ನು ದೇವರೆಂದು ತಿಳಿ. ತಂದೆ ಆಚಾರ್ಯ, ಅತಿಥಿಗಳನ್ನು ದೇವರೆಂದು ಹೇಳಿದಾಗ ಈ ಮೂವರನ್ನು ತಾಯಿ ಸ್ಥಾನಕ್ಕೆ ಏರಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೂ ತಾಯಿ–ಮಗುವಿನ ಸಂಬಂಧಕ್ಕೆ ಬಂದಾಗ, ತಾಯಿ ಈ ಮೂವರಿಗಿಂತಲೂ ಶ್ರೇಷ್ಠಳು ಎನ್ನುವುದು ವ್ಯಕ್ತ ಪಡಿಸುತ್ತಾರೆ, ಒಂದು ಗಾದೆಮಾತಿನಂತೆ " ತಾಯಿಗಿಂದ ಬಂಧುವಿಲ್ಲ ಉಪ್ಪಿಗಿಂದ ರುಚಿ ಇಲ್ಲ" ಎಂಬ ಮಾತಿನಲ್ಲಿ ತಾಯಿ, ಮಕ್ಕಳ ಸಂಬಂಧ ಹಾಗೂ ಇತರ ಸಂಬಂಧಗಳಲ್ಲಿಯ ಅಂತರವನ್ನು ಕುರಿತು ಅತ್ಯಂತ ನಿಖರವಾಗಿ ಇಲ್ಲಿ ತಿಳಿಸುತ್ತಾರೆ. ತಾಯಿಯೇ ಮಕ್ಕಳ ಶ್ರೇಷ್ಠಬಂಧು ಎಂಬುದು ಈ ಗಾದೆಯ ಮಾತಾಗಿದೆ. ಉಪನಿಷತ್ ವಾಕ್ಯಗಳಿಗಿಂತ ಈ ಮಾತು ತಾಯಿಯ ಸ್ಥಾನವನ್ನು ಉಳಿದೆಲ್ಲ ಸಂಬಂಧಗಳಿಗಿಂತ ಮೇಲೆ ಉತ್ತರಿಸಿದ್ದು ಈ ಲೇಖನದಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ.

**ಹಳೆ ಕಣ್ಣು ಹೊಸ ನೋಟ: ಅತಿಥ್ಯ :**

ಪ್ರಸ್ತುತ ಲೇಖನದಲ್ಲಿ ಲೇಖಕಿಯರು ಅತ್ತೆ–ಸೊಸೆಯ ವರ್ಣಿನೆಯನ್ನು ವರ್ಣಿಸಿದ್ದಾರೆ, ಅತ್ತೆಯ ಮಾತಿನ ನಡೆತೆಯನ್ನು ಸೊಸೆ ಸವಿದು ಸಣ್ಣಾಗಬೇಕೆಂಬ ಚಪಲವಾಗಿದೆ. ರೀತಿ–ನೀತಿಗಳಿಗೆ ಸೊಸೆಯನ್ನು ಅನುಗುಣವಾಗಿ ವಿವರಿಸಿದ್ದಾರೆ. ಹೊಸ ಹೊಸ ಜೀವನ ನಡೆತೆಯಲ್ಲಿ ಬಂದ ಸೊಸೆ ಹಳೆಯ ಪೀಳಿಗೆಯನ್ನು ಹೊಸ ಜಗತ್ತಿನ ಹೊಸ ಹೊಸ ವಿಸ್ತಾರಗಳದತ್ತ ಗಮನ ಸೆಳೆಯಬೇಕು, ಅವರಲ್ಲಿ ಈ ಹೊಸ ನೋಟ ದೃಷ್ಟಿಯನ್ನು ಸಾವಕಾಶ ತುಂಬತ್ತಾ ಹೋಗಬೇಕು ಎಂದು ಸ್ಪಷ್ಟ ಗೆಲುವಿನ ಭಾವನೆಗಳಲ್ಲಿ ನಿರ್ಧರಿಸುತ್ತಾ ಹೋಗಿರುವುದು ಕಾಣುತ್ತೇವೆ.

**ಹೊಸ ವರ್ಷದ ಹೊಸ ನಿರೀಕ್ಷೆಗಳು :**

ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರು ಮಹಿಳೆಯ ಬೆಳೆವಣಿಗೆಯನ್ನು ಕುರಿತು ದಿನ ದಿನ ಹೊಸ ವರ್ಷಕ್ಕೆ ಹೊಸವಿಚಾರಗಳನ್ನು ಮಹಿಳೆಯರು ಮುನ್ನುಗುತ್ತಿದ್ದಾರೆ. ಇಂದು ಸಮಾಜದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಮುಂದಿದ್ದಾರೆ. ಲಲಿತಕಲಾ ವಿಭಾಗದಲ್ಲಿ, ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಮಹಿಳೆಯರು ರಾಷ್ಟ್ರಿಯ ಅಂತರಾಷ್ಟ್ರಿಯ ಮಟ್ಟದಲ್ಲಿ ಪ್ರಖ್ಯಾತರಾಗುದ್ದಾರೆ. ಇನ್ನು ರಾಜಕೀಯ ಕ್ಷೇತ್ರದಲ್ಲಿ ವರ್ಷ ವರ್ಷಕ್ಕೆ ಮಹಿಳೆಯರು ಮುನ್ನಗುತ್ತಿದ್ದಾರೆ. ಕಾನೂನು ಶಿಕ್ಷಣ ಕ್ಷೇತ್ರದಲ್ಲಿ ಪಡೆದ ಅಡ್ವೆಕೇಟಗಳು, ಹೈಕೋರ್ಟ ನ್ಯಾಯಾದೀಶಾಗಿದ್ದಾರೆ, ಕೀಡಾ ಜಗತ್ತಿನಲ್ಲೂ ಭಾರತೀಯ ಮಹಿಳೆಯು ಅಂತರಾಷ್ಟ್ರೀಯ

ಸ್ಪರ್ಧೆಗಳಲ್ಲಿ ಭಾಗವಹಿಸಿ, ದೇಶಕ್ಕೆ ಕೀರ್ತಿ ತಂದಿದ್ದಾರೆ. ಎಂದು ಗುರುತಿಸುವಂತೆ ಔದ್ಯಮಿಕ, ಸಾಮಾಜಿಕ ಪರಿಸರ ಹಾಗೂ ಆರ್ಥಿಕ ಕ್ಷೇತ್ರಗಳಲ್ಲೂ ಅನೇಕ ಮಹಿಳೆಯರು ಹೆಸರು ಮಿಂಚುತ್ತಿವೆ. ಬಸ್ ಕಂಡಕ್ಟರ್ ನಿಂದ ಶುರುವಾಗಿ ಆಟೋರೀಕ್ಷಗೆ ತಲಿಪಿದ ಮಹಿಳೆಯರ ಯಶಸ್ವಿಯನ್ನು ಈ ಲೇಖನದಲ್ಲಿ ಗುರುತಿಸುತ್ತಾರೆ.

**ಇಂದಿನ ಸಿನಿಮಾದಲ್ಲಿ ಮಾಡಿದ ಸ್ತ್ರೀ ಪಾತ್ರಗಳು :**

ಇಂದಿನ ಸಿನಿಮಾಗಳಲ್ಲಿ ಮೂಡಿ ಬರುತ್ತಿರುವ ಸ್ತ್ರೀಯ ಪ್ರತಿಮೆ ಹೇಗೆ ಇರುತ್ತವೆ. ಮತ್ತು ಹೇಗೆ ಇರುಬೇಕು ಎಂಬ ಪ್ರಸ್ತುತ ಲೇಖನದ ವಿಷಯವಾಗಿದೆ. ಇಂದು ದಿನೇ ದಿನೇ ವಿಕೃತಗೊಳ್ಳತ್ತ ನೆಡೆದ ಇಂದಿನ ನಮ್ಮ ಸಮಾಜದ ಜ್ವಲಂತ ಸಮಸ್ಯೆಗಳಲ್ಲಿ ಪ್ರಮುಖವಾಗಿದೆ. ಇಂದಿನ ಸಿನಿಮಾಗಳಲ್ಲಿ ಒಂದಕ್ಕಿಂತ ಒಂದು ಕೊಲೆಗಳ್ಳತ್ತಿರುವ ಸ್ತ್ರೀ ಪ್ರತಿಮೆ, ಪ್ರೀತಿ–ಪ್ರೇಮ, ಕಳ–ಸುಳು ಸ್ತ್ರೀಯ ಮಾನಭಂಗ, ಸ್ತ್ರೀಯ ಅರೆಭತ್ತಲೆ ಸ್ತ್ರೀಯರ ಅಶ್ಲೀಲದೃಶ್ಯಗಳು ಇತ್ಯಾದಿ ಯಾರಿಗೂ ದಿಗ್ಭ್ರಮೆ ತಂದಿಲ್ಲವೆಂಬದು ಒಂದು ಸಂಗತಿಯಾದರೆ, ಯಾರು ಇದನ್ನು ಕೇಳಬೇಕು ಎಂಬುದು ಇನ್ನೊಂದು ಸಂಗತಿಯಾಗಿದೆ. ಎಂದು ಲೇಖಕಿ ಈ ಲೇಖನದಲ್ಲಿ ಪ್ರಶ್ನೆಸುತ್ತಾರೆ. ಸ್ತ್ರೀಯರನ್ನು ಸಿನಿಮಾಗಳಲ್ಲಿ ಸಾರ್ವಜನಿಕರೆದುರು ಅಪಮಾನ ಮಾಡುವದನ್ನು ನಾವಿನ್ನು ಕಠೋರವಾಗಿ ವಿರೋಧಿಸಬೇಕು, ಪ್ರೇಕ್ಷಕರಾದ ನಾವೇ ಸ್ತ್ರೀಯರನ್ನು ಅಶ್ಲೀಲ ಹಲವಾರು ದೃಶ್ಯಗಳಲ್ಲಿ ತೋರಿಸುವ ಸಿನಿಮಾಗಳನ್ನು ಸಾಮಾಜಿಕವಾಗಿ ಪ್ರದರ್ಶನಕ್ಕೆ ಹೋರಾಡಿಸಿದ ಚಿತ್ರಗಳನ್ನು ಉಗ್ರವಾಗಿ ಬಹಿಷ್ಕಾರಿಸಬೇಕು. ಸಾಮಾಜಿಕ ಪತ್ರಗಳನ್ನು ಬರೆದು ಸರಕಾರದ ಸಂಬಂಧಪಟ್ಟ ಕಚೇರಿಯಿಂದ ಸಿನಿಮಾ ಡೈರೆಕ್ಟರುಗಳನ್ನು, ಪ್ರೋಡ್ಯುಸರ್‌ಗಳಿಗೆ ಭೇಟಿಯಾಗಿ ಅಂಥ ಸಿನಿಮಾಗಳನ್ನು ಪ್ರದರ್ಶಿಸುವದನ್ನು ನಿಲ್ಲುಸುವಂತೆ ಮಾಡಬೇಕು ಎಂಬ ಉದ್ದೇಶವನ್ನು ಈ ಲೇಖನದಲ್ಲಿ ವ್ಯಕ್ತಪಡಿಸುತ್ತಾರೆ.

**ಸಮಾಜದಲ್ಲಿ ಹಿರಿಯ ನಾಗರಿಕರ ಜವಾಬ್ದಾರಿಗಳು :**

ಮಾಲತಿ ಪಟ್ಟಣಶೆಟ್ಟಿ ಅವರು ಸಮಾಜದಲ್ಲಿ ಹಿರಿಯ ನಾಗರಿಕರ ಜವಾಬ್ದಾರಿಗಳು ತಮ್ಮ ಬದುಕಿನ ಜವಾಬ್ದಾರಿಗಳನ್ನು ನಿರ್ವಹಿಸಿದ ನಂತರ ಇಳಿವಯಸ್ಸಿನಲ್ಲಿ ಹೊಸ ಜವಾಬ್ದಾರಿಗಳನ್ನು ಹೊತ್ತು ಕೊಳ್ಳವುದು ಸೂಕ್ತವೇ? ಜೀವನವಿಡಿ ದುಡಿದು ಸೋತು ಸುಣ್ಣವಾದವರಿಗೆ ವಿಶ್ರಾಂತಿಯ ಬದುಕು ಬೇಡವೇ? ಎಂಬುದು ಈ ಲೇಖನದ ಉದ್ದೇಶವಾಗಿದೆ.

ಹಿರಿಯ ನಾಗರಿಕರ ಪ್ರಪ್ರಥಮ ಜವಾಬ್ದಾರಿ ಎಂದರೆ ತಮ್ಮ ಧೃಢವಾದ ದೇಹದಲ್ಲಿ ದೃಡವಾದ ಮನಸ್ಸುನ್ನು ನಿರ್ಮಿಸುವುದು. ಇದುವರೆಗಿನ ತಮ್ಮ ಕೆಲಸ ಕಾರ್ಯಗಳ ಒತ್ತಡದಲ್ಲಿ ನಿರ್ಲಕ್ಷಿಸಿದ ದೈಹಿಕ ಆರೋಗ್ಯ ಜೊತೆಗೆ ಮಾನಸಿಕ ಆರೋಗ್ಯದತ್ತ ಸಂಪೂರ್ಣ ಲಕ್ಷವನ್ನು ಮೊಟ್ಟ ಮೊದಲ ಕೇಂದ್ರಿಕರಿಸಬೇಕು. ಹಿಂದಿನ ಅವಸರದ ಅವ್ಯವಸ್ಥೆಯ ಬದುಕನ್ನು ಹಿಂದೊಗೆದು ಶಿಸ್ತುಬದ್ಧವಾದ, ನಿಯಮಿತವಾದ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳುವುದು, ಹಿತಮಿತವಾದ ಸಾತ್ವಿಕ ಆಹಾರ ಸೇವನೆ, ನಿಯಮುತ ಯೋಗಾಸನ, ವ್ಯಾಯಮ, ಧಾನಗಳ ಜೊತೆಗೆ ವಾಯುವಿಹಾರ, ಇದರೊಟ್ಟಿಗೆ ಅವಶ್ಯವಿದ್ಧ ನಿಯಮಿತ ಯೋಗಾಸನ, ತಪಾಸನೆ ಇವೆಲ್ಲವೂಗಳ ಹಿರಿಯ ನಾಗರಿಕರ ಇಂದಿನ ಅವಶ್ಯಕ ಜೀವನ ಕ್ರಮಗಳಾಗಬೇಕು. (೦¸ಠಣಟಿಜ ಟುಟಿಜ ಚಿಟ ೦¸ಠಣಟಿಜ ಃಠಜಥಿ) ಎನ್ನುವಂತೆ ಸದೃಢವಾದ ಶರೀರವಿದ್ದರೆ ಮಾತ್ರ ಸಧೃಡವಾದ ಮನಸ್ಸು ಚೈತನ್ಯಪೂರ್ವವಾಗಿ ಇಟ್ಟುಕೊಳ್ಳುವುದೂ ನಮ್ಮ ಹಿರಿಯ ನಾಗರಿಕರ ಜವಾಬ್ದಾರಿಯಾಗಿದೆ. ಆದ್ದರಿಂದ ಸಕಾರತ್ಮಕ ಚಿಂತನೆ, ಸತ್ಸಂಗ, ಉತ್ತಮಗ್ರಂಥವಾಚನ ಪ್ರವಾಸ, ಪ್ರಾರ್ಥನೆ, ಉತ್ತಮ ಉಪನ್ಯಾಸಗಳ ಇತ್ಯಾದಿ

ಕುಟುಂಬದ ಸದಸ್ಯರ ಮೇಲೆ ಇರುತ್ತದೆ, ಹೀಗೆ ದೈಹಿಕ ಆರೋಗ್ಯದೊಂದಿಗೆ ಮಾನಸಿಕ ಸಂಕುಲನಗಳನ್ನು ತೂಗಿಸಿಕೊಂಡು ಹೋಗಬೇಕಾದ ಪ್ರಮುಖ ಜವಾಬ್ದಾರಿ ಹಿರಿಯ ನಾಗರಿಕರದಾಗಿರುತ್ತದೆ ಎಂದು ಗುರುತಿಸುತ್ತಾರೆ.

**3. ಇತರೆ ಲೇಖನಗಳು (ಮುನ್ನುಡಿಗಳು)**

**"ದಿನಂತ"ದತ್ತ ಎರಡು ಹೆಜ್ಜೆ :**

ದಿಗಂತ ಎಂಬ ಕಾದಂಬರಿಯಲ್ಲಿ ಮಾಲತಿ ಪಟ್ಟಣಶೆಟ್ಟಿಯವರು ಬಹುಮುಖ ರೀತಿಯ ತಮ್ಮ ಮುನ್ನಡಿಯಲ್ಲಿ ಇಡೀ ಕಾದಂಬರಿಯ ಸಾರಾಂಶದ ಗುಣಗಳನ್ನು ಗುರುತಿಸಲು ಪ್ರಯತ್ರಿಸಿದ್ದಾರೆ.

ಡಾ. ನಾ ಮೊಗಸಾಲೆಯವರು ಕನ್ನಡಗರಿಗೆ ಚಿರಪರಿಚಿತ ಲೇಖಕರು, ಕಾವ್ಯದ ಮೂಲಭಂಡಾರಿಗರಾದ ಇವರು ಗದ್ಯಪ್ರಕಾರಗಳಿಗೆ, ತಮ್ಮ ಪ್ರತಿಭೆಯ ಸರಕನ್ನು ನೀಡುದ್ದು, ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತದೆ ಎಂದು ಗುರುತಿಸುತ್ತಾರೆ. 1988ರಲ್ಲಿ ಪ್ರಕಟಗೊಂಡ ಇವರ ಕಾದಂಬರಿ 'ದಿಗಂತ'ವು ಮೊಗಸಾಲೆಯವರ ಕಥನ ಕಲೆಗೆ ಮತ್ತು ಅವರ ತೀವ್ರ ಸಾಮಾಜಿಕ ಕಾಳಜಿಗಳನ್ನು ಪರಿಚಯಿಸುವ ಒಂದು ಚಿಕ್ಕ ಕಾದಂಬರಿ, ಈ ಲೆಕ್ಕ ಕಾದಂಬರಿಯಾದರೂ ಎತ್ತಿಕೊಂಡ ವಿಷಯ ದೊಡ್ಡದು ಎಂದು ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಭಾರತೀಯ ಜನಮಾನದ ಸಂದರ್ಭದಲ್ಲಿ ವೈಜ್ಞಾನಿಕ ದೃಷ್ಟಿಕೋನದ ಅಗತ್ಯವನ್ನು ತಳ್ಳಿ ಹಾಕುವ, ಅನಾಗರಿಕರಲ್ಲಿ ಅಶಿಕ್ಷಿರಲ್ಲಷ್ಟೇ ಅಲ್ಲವೇ ಸುಶೀಕ್ಷಿತರಲ್ಲೂ, ರಾಜಕಾರಣಿಗಳಲ್ಲೂ, ಅವಕಾಶವಾದಿಗಳಲ್ಲೂ ಇದ್ದದ್ದರಿಂದ ಪ್ರಗತಿ ಎಂಬ ಸೂರ್ಯನ ಉದಯವು ಎತ್ತಕಡಿಯ ಪ್ರತೀಕದಂತಿರುವ ನಮ್ಮ ದೇಶದಲ್ಲಿ ಸಾಧ್ಯವಾಗದ ದುಗುಡವು ಈ ಕಾದಂಬರಿಯಲ್ಲಿ ಎದ್ದು ಕಾಣುತ್ತದೆ ಎಂದು ಲೇಖಕಿರಯ ಗುರುತಿಸುತ್ತಾರೆ.

**ಮಾನವೀಯ ಸಂಬಂಧಗಳನ್ನು ವಿಶ್ಲೇಷಿಸುವ ಬೆಕ್ಕು ಮತ್ತು ಇತರೆ ಕತೆಗಳು :**

ಪ್ರಸ್ತುತ ಈ ಕತೆಗಳಲ್ಲಿ ಮಾನವೀಯ ಸಂಬಂಧಗಳನ್ನು ವಿಶ್ಲೇಷಿಸುವ ಬೆಕ್ಕು ಮತ್ತು ಇತರ ಕತೆಗಳು ಎಂಬ ಶ್ರೀ ಚಂದ್ರಕಾಂತ ಕುಸುನೂರರ ಈ ಕಥಾ ಸಂಗ್ರಹದ ಮುನ್ನುಡಿಯಲ್ಲಿ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರ ದಾಖಲಿಸಿದ ಮಾತುಗಳು, ಈ ಸಂಗ್ರಹದ ಕತೆಗಳ ವಿಶ್ಲೇಷಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತವೆ ಎಂದು ಊಹಿಸಿದ್ದಾರೆ.

ಈ ಕಥಾ ಸಂಗ್ರಹದಲ್ಲಿ ಆರು ಕತೆಗಳನ್ನು ಒಳಗೊಂಡಿದೆ ಪ್ರಸ್ತುತ ಕತೆಗಳಲ್ಲಿ 'ಅನುಭವ' ಕಲೆಯ ಕ್ಷೇತ್ರ ಪ್ರವೇಶ ಮಾಡಿದರೆ, ಅದು ತನ್ನ ವಾಸ್ತವತೆಯಿಂದ ಬಿಡುಗಡೆ ಹೊಂದುತ್ತದೆ. 'ಅನುಭವ' ಕತೆಯ ಪ್ರಾಂತದಲ್ಲಿ ಅಭಿನಯಕ್ಕೆ ಸಿದ್ದ ಕಲಾವಿದನಂತೆ, ತನ್ನ ರೂಪ–ರಂಗಗಳನ್ನು ಬದಲಾಯಿಸಿಕೊಳ್ಳುತ್ತದೆ. ಅನುಭವದ ಜೊತೆ ಭಾಷೆಯೂ ನಟನೆಗೆ ಸಿದ್ಧವಾಗುತ್ತದೆ. ಇಲ್ಲೊಂದು ಕಾಲ್ಪನಿಕ ಜಗತ್ತು ಹುಟ್ಟಿಕೊಳ್ಳುತ್ತದೆ. ಎಂದು ಈ ಕತೆಗಳಲ್ಲಿ ಕಾಣಿಸಿಕೊಳ್ಳುವ ಹಾಸ್ಯ ವಿಡಂಬನೆ, ವ್ಯಂಗ್ಯ, ಸುಖ–ದುಃಖ ಎಲ್ಲವೂ ಕಾಲ್ಪನಿಕ ಜಗತ್ತಿಗೇ ಸಂಬಂಧಿಸಿದ್ದಾಗಿದೆ ಎಂದು ಲೇಖಕಿ ಗುರುತ್ತಿಸುತ್ತಾರೆ ಅನುಭವವನ್ನು ವಿವಿಧ ಪರಿಸರ, ಸಂಸ್ಕೃತಿ ಭಾಷೆಗಳ ನೆಲದಲ್ಲಿ ನೆಟ್ಟು, ವಾಸ್ತವದ ಮಣ್ಣಿಗೆ ತಮ್ಮ ಮಾನವೀಯ ಮಿಡಿತ, ಸಾಮಾಜಿಕ ಚಿಂತನೆಯ ನೀರೆರೆದು ವ್ಯಂಗ್ಯ ವಿಡಂಬನೆ, ಹಾಸ್ಯದ ಗೊಬ್ಬರ ಕೊಟ್ಟು ಕಲ್ಪನೆಯ ಸೂರ್ಯನ ಬೆಳಕಿನಲ್ಲಿ ಬೆಳೆಸಿದ ಗಿಡಗಳೆಂತಿವೆ, ಎಂದು ಈ ಸಂಗ್ರಹದ ಆರು ಕತೆಗಳಲ್ಲಿ ಕಂಡು ಬರುತ್ತವೆ ಎಂದು ಗುರುತ್ತಿಸುತ್ತಾರೆ.

ಈ ಕತೆಗಳನ್ನು ಎರಡು ನೆಲೆಗಳಲ್ಲಿ ಗುರುತಿಸುತ್ತಾರೆ. ಬರಗಾಲದ ಪರಿಸರದಲ್ಲಿ ನಿರಂತರವಾಗಿದ್ದು ಬಿಸಿಲು, ಅನಾದೃಷ್ಟಿ, ಬಡತನ, ಅವುಗಳ ಜೊತೆಗೆ ಅಧಿಕಾರಶಹಿತ ದಬ್ಬಾಳಿಕೆಗಳಿಂದಾಗಿ ಗ್ರಾಮೀಣ ರೈತಾಪಿಜನತೆಯ ಕಟುವಾಸ್ತವದ ಬದುಕಿನ ಸುತ್ತ ಹಣೆದ ಕತೆಗಳು, ಒಂದಡೆ ಇದ್ದಾರೆ ಇನ್ನೊಂದಡೆ ಆಧುನೀಕರಣದ ಬೀರುಗಾಳಿಗೆ ಸಿಕ್ಕೆ ಮದ್ಯಮ ವರ್ಗದ ಕೌಟುಂಬಿಕ ಸಂಬಂಧಗಳು ವಿಕೃತಗೊಳ್ಳುತ್ತವೆ,

**ಸಮಾರೋಪ**

ಓರ್ವ ಸಾಹತಿಯಾದ ಮಾಲತಿ ಪಟ್ಟಣಶೆಟ್ಟಿಯವರು ಸಮಾಜದ ಮೌಲ್ಯಗಳನ್ನು ಎತ್ತಿಹಿಡಿಯುವಂತಹ ಲೇಖನಗಳನ್ನೊಳಗೊಂಡು ಮಹಾನ್ ಕವಿಹೃದಯವನ್ನು ತೆರೆದಿಟ್ಟು ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಅನುಲಕ್ಷಿಸಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

**ಪರಾಮರ್ಶನ ಗ್ರಂಥಗಳು**


- ಆನಂದ ಝುಂಜರವಾಡ (ಸಂ.) (2000). ಹಿರಿಹೊಳೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಹೊಸತು ಪತ್ರಿಕೆ 2013.
- ಮಾಲತಿ ಪಟ್ಟಣಶೆಟ್ಟಿ : ಸಾರಸಂಗ್ರಹ.
- ಮುದ್ದುಕೃಷ್ಣ ವೈ.ಕ (ಸಂ.). (1998). ವರ್ಣಸಂಚಯ. ಪ್ರಕಾಶನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.